# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 78(97)

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 27.01.2026

ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಸಿ.ಎ. ನಿವೇಶನಗಳನ್ನು ಯಾವ ಉದ್ದೇಶಗಳಿಗೆ ಮತ್ತು ಯಾರಿಗೆ ಮಂಜೂರು ಮಾಡಬಹುದು ಹಾಗೂ ಯಾರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ: | ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಸಿ.ಎ. ನಿವೇಶನಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 27 ಟಿಟಿಪಿ 2016, ದಿನಾಂಕ: 24.05.2017ರಲ್ಲಿ ತಿಳಿಸಿರುವಂತೆ ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 1 ಟಿಎಂಡಿ 2018, ದಿನಾಂಕ: 30.01.2018ರಂತೆ ಕ್ರಮವಹಿಸಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲಾಗುತ್ತಿದೆ. |
| ಆ) | ಮಂಜೂರು ಮಾಡಲು ಅನುಸರಿಸುವ ಕ್ರಮ / ವಿಧಾನ ಯಾವುದು: | |
| ಇ) | ಪೌರಾಡಳಿತ ಇಲಾಖೆ ವ್ಯಾಪ್ತಿಯಲ್ಲಿನ ಎಷ್ಟು ಸಿ.ಎ. ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವಂತೆ ಕೇಳಲಾಗಿತ್ತು: ಎಷ್ಟು ನಿವೇಶನಗಳನ್ನು ನೀಡಲಾಗಿದೆ: (ವಿವರ ನೀಡುವುದು) | ಪೌರಾಡಳಿತ ಇಲಾಖೆ ವ್ಯಾಪ್ತಿಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಸಿ.ಎ ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವಂತೆ ಕೇಳಲಾದ ವಿವರ ಮತ್ತು ನಿವೇಶನ ನೀಡಲಾದ ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಈ) | ಸಿ. ಎ. ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವ ಕುರಿತು ಕಾನೂನು ಇಲಾಖೆ ನೀಡಿದ ಅಭಿಪ್ರಾಯವೇನು: ಅಭಿಪ್ರಾಯದ ಪ್ರತಿಯನ್ನು ನೀಡುವುದು: | ಸಿ. ಎ. ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವ ಕುರಿತು ಕಾನೂನು ಇಲಾಖೆ ನೀಡಿದ ಅಭಿಪ್ರಾಯದ ಪ್ರತಿಯನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಉ) | ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡಲಾದ ಸಿ.ಎ. ನಿವೇಶನಗಳ ಮಾರುಕಟ್ಟೆ ಮೌಲ್ಯವೆಷ್ಟು: ಎಷ್ಟು ಮೊತ್ತ ರಿಯಾಯತಿಯನ್ನು ನೀಡಲಾಗಿದೆ; ಇದರಿಂದ ಸರ್ಕಾರಕ್ಕೆ / ಸ್ಥಳೀಯ ಸಂಸ್ಥೆಗಳಿಗೆ ಉಂಟಾದ ನಷ್ಟವೆಷ್ಟು: | ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡಲಾದ ಸಿ.ಎ. ನಿವೇಶನಗಳ ಮಾರುಕಟ್ಟೆ ಮೌಲ್ಯ, ರಿಯಾಯತಿ ಮೊತ್ತದ ವಿವರವನ್ನು **ಅನುಬಂಧ-1ರಲ್ಲಿ** ಸಲ್ಲಿಸಲಾಗಿದೆ. |
| ಊ) | ನಗರಸಭೆಗಳ ಸಾಮಾನ್ಯ ಸಭೆಯಲ್ಲಿ ಸಿ.ಎ. ನಿವೇಶನಗಳನ್ನು ಕಾಂಗ್ರೆಸ್ ಭವನಕ್ಕೆ ನೀಡುವ ಕುರಿತು ಮಾಡಲಾದ ನಿರ್ಣಯವೇನು? (ಸದರಿ ನಿರ್ಣಯದ ಪ್ರತಿಯನ್ನು ನೀಡುವುದು) | ನಗರಸಭೆಗಳ ಸಾಮಾನ್ಯ ಸಭೆಯಲ್ಲಿ ಸಿ.ಎ. ನಿವೇಶನಗಳನ್ನು ಕಾಂಗ್ರೆಸ್ ಭವನಕ್ಕೆ ನೀಡುವ ಕುರಿತು ಮಾಡಲಾದ ನಿರ್ಣಯದ ಪ್ರತಿಗಳನ್ನು **ಅನುಬಂಧ-3ರಲ್ಲಿ** ನೀಡಲಾಗಿದೆ. |

ಇ-ಸಂಖ್ಯೆ: ನಅಇ 26 ಜಿಇಎಲ್ 2026 (ಇ)

**( ರಹೀಂ ಖಾನ್ )**
ಪೌರಾಡಳಿತ ಮತ್ತು ಹಜ್ ಸಚಿವರು

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 78(97)
ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 27.01.2026
ಉತ್ತರಿಸುವವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಸಿ.ಎ. ನಿವೇಶನಗಳನ್ನು ಯಾವ ಉದ್ದೇಶಗಳಿಗೆ ಮತ್ತು ಯಾರಿಗೆ ಮಂಜೂರು ಮಾಡಬಹುದು ಹಾಗೂ ಯಾರಿಗೆ ಮಂಜೂರು ಮಾಡಲು ಅವಕಾಶವಿರುವುದಿಲ್ಲ: | ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರಿದ ಸಿ.ಎ. ನಿವೇಶನಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ 27 ಟಿಟಿಪಿ 2016, ದಿನಾಂಕ: 24.05.2017ರಲ್ಲಿ ತಿಳಿಸಿರುವಂತೆ ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 1 ಟಿಎಂಡಿ 2018, ದಿನಾಂಕ: 30.01.2018ರಂತೆ ಕ್ರಮವಹಿಸಿ ಲೀಸ್ ಆಧಾರದ ಮೇಲೆ ಮಂಜೂರು ಮಾಡಲಾಗುತ್ತಿದೆ. |
| ಆ) | ಮಂಜೂರು ಮಾಡಲು ಅನುಸರಿಸುವ ಕ್ರಮ / ವಿಧಾನ ಯಾವುದು: | |
| ಇ) | ಪೌರಾಡಳಿತ ಇಲಾಖೆ ವ್ಯಾಪ್ತಿಯಲ್ಲಿನ ಎಷ್ಟು ಸಿ.ಎ. ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವಂತೆ ಕೇಳಲಾಗಿತ್ತು: ಎಷ್ಟು ನಿವೇಶನಗಳನ್ನು ನೀಡಲಾಗಿದೆ: (ವಿವರ ನೀಡುವುದು) | ಪೌರಾಡಳಿತ ಇಲಾಖೆ ವ್ಯಾಪ್ತಿಯಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಸಿ.ಎ ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವಂತೆ ಕೇಳಲಾದ ವಿವರ ಮತ್ತು ನಿವೇಶನ ನೀಡಲಾದ ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಈ) | ಸಿ. ಎ. ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವ ಕುರಿತು ಕಾನೂನು ಇಲಾಖೆ ನೀಡಿದ ಅಭಿಪ್ರಾಯವೇನು: ಅಭಿಪ್ರಾಯದ ಪ್ರತಿಯನ್ನು ನೀಡುವುದು: | ಸಿ. ಎ. ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡುವ ಕುರಿತು ಕಾನೂನು ಇಲಾಖೆ ನೀಡಿದ ಅಭಿಪ್ರಾಯದ ಪ್ರತಿಯನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಉ) | ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡಲಾದ ಸಿ.ಎ. ನಿವೇಶನಗಳ ಮಾರುಕಟ್ಟೆ ಮೌಲ್ಯವೆಷ್ಟು: ಎಷ್ಟು ಮೊತ್ತ ರಿಯಾಯತಿಯನ್ನು ನೀಡಲಾಗಿದೆ; ಇದರಿಂದ ಸರ್ಕಾರಕ್ಕೆ / ಸ್ಥಳೀಯ ಸಂಸ್ಥೆಗಳಿಗೆ ಉಂಟಾದ ನಷ್ಟವೆಷ್ಟು: | ಕಾಂಗ್ರೆಸ್ ಭವನ ಟ್ರಸ್ಟ್‌ಗೆ ನೀಡಲಾದ ಸಿ.ಎ. ನಿವೇಶನಗಳ ಮಾರುಕಟ್ಟೆ ಮೌಲ್ಯ, ರಿಯಾಯತಿ ಮೊತ್ತದ ವಿವರವನ್ನು **ಅನುಬಂಧ-1ರಲ್ಲಿ** ಸಲ್ಲಿಸಲಾಗಿದೆ. |
| ಊ) | ನಗರಸಭೆಗಳ ಸಾಮಾನ್ಯ ಸಭೆಯಲ್ಲಿ ಸಿ.ಎ. ನಿವೇಶನಗಳನ್ನು ಕಾಂಗ್ರೆಸ್ ಭವನಕ್ಕೆ ನೀಡುವ ಕುರಿತು ಮಾಡಲಾದ ನಿರ್ಣಯವೇನು? (ಸದರಿ ನಿರ್ಣಯದ ಪ್ರತಿಯನ್ನು ನೀಡುವುದು) | ನಗರಸಭೆಗಳ ಸಾಮಾನ್ಯ ಸಭೆಯಲ್ಲಿ ಸಿ.ಎ. ನಿವೇಶನಗಳನ್ನು ಕಾಂಗ್ರೆಸ್ ಭವನಕ್ಕೆ ನೀಡುವ ಕುರಿತು ಮಾಡಲಾದ ನಿರ್ಣಯದ ಪ್ರತಿಗಳನ್ನು **ಅನುಬಂಧ-3ರಲ್ಲಿ** ನೀಡಲಾಗಿದೆ. |

ಇ-ಸಂಖ್ಯೆ: ನಅಇ 26 ಜಿಇಎಲ್ 2026 (ಇ)

**( ರಹೀಂ ಖಾನ್ )**
ಪೌರಾಡಳಿತ ಮತ್ತು ಹಜ್ ಸಚಿವರು

| LCQ 78(97) ಶ್ರೀ ಚಿದಾನಂದ ರವರ ಪ್ರಶ್ನೆಗೆ ಅನುಬಂಧ | | | | | | | |
|---|---|---|---|---|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ಪ್ರಸ್ತಾವನೆ ಸ್ವೀಕೃತವಾಗಿರುವ ನಗರ ಸ್ಥಳೀಯ ಸಂಸ್ಥೆಯ ಹೆಸರು | ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಿರುವ ನಗರ ಸ್ಥಳೀಯ ಸಂಸ್ಥೆಯ ಹೆಸರು | ಸರ್ಕಾರದಿಂದ ಅನುಮೋದನೆ ಯಾಗಿರುವ ವಿವರ | ಮಾರುಕಟ್ಟೆ ಮೌಲ್ಯ | ರಿಯಾಯತಿ ದರದಲ್ಲಿ ನೀಡಿರುವ ಮೊತ್ತ | ಸಾಮಾನ್ಯ ಸಭೆಯ ನಿರ್ಣಯ |
| 1 | ಬಾಗಲಕೋಟೆ | ಲೋಕಾಪುರ | ಲೋಕಾಪುರ ಪಟ್ಟಣ ಪಂಚಾಯಿತಿ | GO No.UDD 8 TMD 25 Dtd 14.10.2025 | 21,03,255.00 | 1,05,162.75 | ಲಗತ್ತಿಸಿದೆ |
| 2 | ಧಾರವಾಡ | ನವಲಗುಂದ | ನವಲಗುಂದ ಪುರಸಭೆ | GO No.UDD 11 TMD 25 Dtd 14.10.2025 | 38,60,310.00 | 1,93,015.50 | ಲಗತ್ತಿಸಿದೆ |
| 3 | ಧಾರವಾಡ | ಅಣ್ಣಿಗೇರಿ | ಅಣ್ಣಿಗೇರಿ ಪುರಸಭೆ | GO No.UDD 11 TMD 25 Dtd 14.10.2025 | 31,70,750.00 | 1,58,537.50 | ಲಗತ್ತಿಸಿದೆ |
| 4 | ಬೆಂಗಳೂರು ದಕ್ಷಿಣ | ಮಾಗಡಿ | ಮಾಗಡಿ ಪುರಸಭೆ | GO No.UDD 11 TMD 25 Dtd 14.10.2025 | 40,98,513.00 | 2,04,925.65 | ಲಗತ್ತಿಸಿದೆ |
| 5 | ಕಲಬುರಗಿ | ಅಫಜಲಪೂರ | ಅಫಜಲಪೂರ ಪುರಸಭೆ | GO No.UDD 11 TMD 25 Dtd 14.10.2025 | 50,42,700.00 | 2,52,135.00 | ಲಗತ್ತಿಸಿದೆ |
| 6 | ಶಿವಮೊಗ್ಗ | ಶಿಕಾರಿಪುರ | ಶಿಕಾರಿಪುರ ಪುರಸಭೆ | GO No.UDD 24 TMD 25 Dtd 15.12.2025 | 11,50,000.00 | 57,500.00 | - |
| 7 | ಶಿವಮೊಗ್ಗ | ಆನವಟ್ಟಿ | ಆನವಟ್ಟಿ ಪಟ್ಟಣ ಪಂಚಾಯಿತಿ | GO No.UDD 24 TMD 25 Dtd 15.12.2025 | 21,45,715.00 | 1,07,285.75 | - |
| 8 | ಚಿತ್ರದುರ್ಗ | ಹೊಳಲ್ಕೆರೆ | ಹೊಳಲ್ಕೆರೆ ಪುರಸಭೆ | GO No.UDD 24 TMD 25 Dtd 15.12.2025 | 32,77,154.00 | 1,63,857.70 | ಲಗತ್ತಿಸಿದೆ |
| 9 | ಉತ್ತರ ಕನ್ನಡ | ಹಳಿಯಾಳ | ಹಳಿಯಾಳ ಪುರಸಭೆ | GO No.UDD 24 TMD 25 Dtd 15.12.2025 | 17,32,500.00 | 86,625.00 | ಲಗತ್ತಿಸಿದೆ |
| 10 | ರಾಯಚೂರು | ಮಾನವಿ | ಮಾನವಿ ಪುರಸಭೆ | GO No.UDD 24 TMD 25 Dtd 15.12.2025 | 16,05,900.00 | 80,295.00 | ಲಗತ್ತಿಸಿದೆ |
| 11 | ಯಾದಗಿರಿ | ಶಹಾಪುರ | ಶಹಾಪುರ ನಗರಸಭೆ | GO No.UDD 24 TMD 25 Dtd 15.12.2025 | 95,82,020.00 | 4,79,101.00 | ಲಗತ್ತಿಸಿದೆ |
| 12 | ಚಿಕ್ಕಬಳ್ಳಾಪುರ | ಗೌರಿಬಿದನೂರು | ಗೌರಿಬಿದನೂರು ನಗರಸಭೆ | GO No.UDD 24 TMD 25 Dtd 15.12.2025 | 1,08,98,280.00 | 5,44,914.00 | ಲಗತ್ತಿಸಿದೆ |

PRASANNA KUMAR. V.K, K.A.S
JOINT DIRECTOR (Developm
Directorate of Municipal Adminis
BENGALURU

| | | | | | | | |
|---|---|---|---|---|---|---|---|
| 13 | ಕಲಬುರಗಿ | ಚಿಂಚೋಳಿ | ಚಿಂಚೋಳಿ ಪುರಸಭೆ | ಸಂ.ನಂ: ನಅಇ 231 ಸಿಎಸಿ 2025(ಇ) ದಿ/13.1.26 | 28,24,900.00 | 1,41,245.00 | ಲಗತ್ತಿಸಿದೆ |
| 14 | ಕಲಬುರಗಿ | ಕಾಳಗಿ | ಕಾಳಗಿ ಪಟ್ಟಣ ಪಂಚಾಯಿತಿ | 〃 | 15,37,300.00 | 76,865.00 | ಲಗತ್ತಿಸಿದೆ |
| 15 | ಬೆಂಗಳೂರು ಗ್ರಾಮಾಂತರ | ದೇವನಹಳ್ಳಿ | ದೇವನಹಳ್ಳಿ ಪುರಸಭೆ | 〃 | 17,31,01,841.00 | 86,55,092.05 | ಲಗತ್ತಿಸಿದೆ |
| 16 | ಕೊಪ್ಪಳ | ಯಲಬುರ್ಗ | ಯಲಬುರ್ಗ ಪುರಸಭೆ | ಪರಿಶೀಲನೆಯಲ್ಲಿದೆ | - | - | - |
| 17 | ಬಾಗಲಕೋಟೆ | ಇಳಕಲ್ | ಇಳಕಲ್ ನಗರಸಭೆ | ಪರಿಶೀಲನೆಯಲ್ಲಿದೆ | - | - | - |
| 18 | ಬಾಗಲಕೋಟೆ | ಹುನಗುಂದ | ಹುನಗುಂದ ಪುರಸಭೆ | ಪರಿಶೀಲನೆಯಲ್ಲಿದೆ | - | - | - |

ಆಡಳಿತ ಇಲಾಖೆಯು ಕೆಳಕಂಡ ನಾಗರಿಕ ಸೌಲಭ್ಯ ನಿವೇಶನಗಳನ್ನು ಕಾಂಗ್ರೇಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಲೀಸ್ ಆಧಾರದ ಮೇಲೆ ಮಂಜೂರು / ಹಂಚಿಕೆ ಮಾಡಲು ಪ್ರಸ್ತಾವನೆಗಳನ್ನು ಸಚಿವ ಸಂಪುಟದ ಮುಂದೆ ಮಂಡಿಸಲು ಕಾನೂನು ಇಲಾಖೆಯ ಅಭಿಪ್ರಾಯ / ಸಹಮತಿ ಕೋರಿ ಕಡತವನ್ನು ಸಲ್ಲಿಸಿರುತ್ತದೆ.

a. ಕಲಬುರಗಿ ಜಿಲ್ಲೆಯ ಅಫಜಲಪೂರ ಪುರಸಭೆ ವ್ಯಾಪ್ತಿಯಲ್ಲಿ ಇರುವ ಸರ್ವೆ ನಂ.354/12ರಲ್ಲಿರುವ ವಿಸ್ತೀರ್ಣ 1120.63 ಚ.ಮೀ ಸಿ.ಎ. ನಿವೇಶನವನ್ನು ಕಾಂಗ್ರೇಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ನೀಡುವಂತೆ ಕೋರಿರುವ ಕುರಿತು.
b. ದೇವನಹಳ್ಳಿ ಪುರಸಭೆ ವ್ಯಾಪ್ತಿಯ ವಾರ್ಡ್ ನಂ:10ರ ಅಜ್ಮಲ್ ಬಡಾವಣೆಯ ಸಿ ಎ ನಿವೇಶನ ಆಸ್ತಿ ಸಂಖ್ಯೆ:3224/49/2/51/52/2ರ ಸ್ವತ್ತನ್ನು ಕಾಂಗ್ರೇಸ್ ಭವನ ಟ್ರಸ್ಟ್(ರಿ) ದೇವನಹಳ್ಳಿ ರವರಿಗೆ ಮಂಜೂರು ಮಾಡಲು ಕೋರಿರುವ ಕುರಿತು.
c. ಕಾಳಗಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸರ್ವೆ ನಂ.230/3ರಲ್ಲಿರುವ ವಿಸ್ತೀರ್ಣ 614.92 ಚ.ಮೀ ಸಿ.ಎ ನಿವೇಶನವನ್ನು ಕಾಂಗ್ರೇಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ನೀಡುವಂತೆ ಕೋರಿರುವ ಕುರಿತು.
d. ಚಿಂಚೋಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ.143/2ರಲ್ಲಿರುವ ವಿಸ್ತೀರ್ಣ 1086.50 ಚ.ಮೀ ಸಿ.ಎ ನಿವೇಶನವನ್ನು ಕಾಂಗ್ರೇಸ್ ಭವನ ಕಟ್ಟಡ ನಿರ್ಮಾಣಕ್ಕಾಗಿ ನೀಡುವಂತೆ ಕೋರಿರುವ ಕುರಿತು.
e. ರಾಯಚೂರು ಜಿಲ್ಲೆ, ಲಿಂಗಸೂರು ತಾಲ್ಲೂಕಿನ ಹುಲಿಗುಡ್ಡ ಗ್ರಾಮದ ಸ ನಂ 13/*/8 ರಲ್ಲಿ ಕ್ಷೇತ್ರ: 5 ಎ -00 ಗುಂಟೆ ವಿಸ್ತೀರ್ಣದ ಜಮೀನಿನ ವಿನ್ಯಾಸದಲ್ಲಿ ಕಾಯ್ದಿರಿಸಿದ ನಾಗರೀಕ ಸೌಲಭ್ಯ (ಸಿ.ಎ) ನಿವೇಶನವನ್ನು ಕಾಂಗ್ರೇಸ್ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಮಂಜೂರು ಮಾಡಲು ಕೋರಿರುವ ಕುರಿತು.

The Karnataka Planning Authorities (Allotment of Civic Amenity sites) Rules, 2016 ರ ನಿಯಮ 3ರನ್ವಯ ಪ್ರಾಧಿಕಾರವು ನಾಗರಿಕ ಸೌಲಭ್ಯ ನಿವೇಶನಗಳನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು ಮತ್ತು ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಂಜೂರಾತಿ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

The Karnataka Planning Authorities (Allotment of Civic Amenity sites) Rules, 2016 ರ ನಿಯಮ 2(f) ರನ್ವಯ "Institution" ಎಂಬ ಪದದ ವ್ಯಾಖ್ಯಾನದಲ್ಲಿ ದತ್ತಿ ಉದ್ದೇಶಕ್ಕಾಗಿ ಸ್ಥಾಪಿತವಾದ ಅಂದರೆ ಶೈಕ್ಷಣಿ, ಧಾರ್ಮಿಕ ಅಥವಾ ಸಾಮಾಜಿಕ ಉದ್ದೇಶಕ್ಕಾಗಿ ಸ್ಥಾಪಿತವಾದ ಸಂಸ್ಥೆ.

ಲಾ/ಅಭಿಪ್ರಾಯ/838/2025

UDD/36/TMD/2025(PART-1)

ಆಡಳಿತ ಇಲಾಖೆಯು ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಸಂಸ್ಥೆಯು The Karnataka Planning Authorities (Allotment of Civic Amenity sites) Rules, 2016 ರ ನಿಯಮ 2(f) ರಲ್ಲಿ ವ್ಯಾಖ್ಯಾನಿಸಿರುವ "Institution" ಎಂಬ ಪದದ ವ್ಯಾಖ್ಯಾನದಡಿಯಲ್ಲಿ ಬರುವುದಿಲ್ಲ.

ಆದುದರಿಂದ ಆಡಳಿತ ಇಲಾಖೆಯು ತಿಳಿಸಿರುವ ಮೇಲ್ಕಂಡ ಐದು ನಾಗರಿಕ ಸೌಲಭ್ಯ ನಿವೇಶನಗಳನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಲೀಸ್ ಆಧಾರದ ಮೇಲೆ ಮಂಜೂರು / ಹಂಚಿಕೆ ಮಾಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಬೆಂಎಂಡಿ 2002 ದಿನಾಂಕ 02.06.2003 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 27 ಟಿಟಿಪಿ 2017 ದಿನಾಂಕ 24.05.2017ರನ್ವಯ ಮತ್ತು ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಲಾದ ನಿವೇಶನಗಳನ್ನು Karnataka Planning Authorities (Allotment of Civic amenity sites) Rules, 2016 ರನ್ವಯ ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂಬುದು ಕಾನೂನು ಇಲಾಖೆಯ ಅಭಿಪ್ರಾಯವಾಗಿದೆ

**(ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವರಿಂದ ಅನುಮೋದಿತ.)**

(ಕೆ.ಎಲ್. ಅಶೋಕ್) 04/12/25

ಸರ್ಕಾರದ ಅಪರ ಕಾರ್ಯದರ್ಶಿ-1

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸರ್ಕಾರದ ಕಾರ್ಯದರ್ಶಿಗಳವರು,

ನಗರಾಭಿವೃದ್ಧಿ ಇಲಾಖೆ

ಲಾ ಅಭಿಪ್ರಾಯ 556 2025
UDD/8/TMD/2025

ಕಾನೂನು ಇಲಾಖೆ (ಅಭಿಪ್ರಾಯ)
ದಿನಾಂಕ:04.08.2025

ಆಡಳಿತ ಇಲಾಖೆಯು ಲೋಕಾಪೂರ ಪಟ್ಟಣ ಪಂಚಾಯತಿಯ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741. ಕ್ಷೇತ್ರ-400.63 ಚ.ಮೀಟರ್ ನಿವೇಶನವನ್ನು ಅಧ್ಯಕ್ಷರು. ಬ್ಲಾಕ್ ಕಾಂಗ್ರೆಸ್ ಕಮಿಟಿ. ಲೋಕಪೂರ ಇವರಿಗೆ ಲೀಜ್ ಆಧಾರದ ಮೇಲೆ 30 ವರ್ಷಗಳವರೆಗೆ ನೀಡುವ ಕುರಿತು ಸಿದ್ಧಪಡಿಸಿರುವ ಕರಡು ಸಚಿವ ಸಂಪುಟ ಟಿಪ್ಪಣಿಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಿರುತ್ತದೆ.

ಲೋಕಾಪೂರ ಪಟ್ಟಣದ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741 ಕ್ಷೇತ್ರ-400.63 ಚ.ಮೀಟರ್ ನಿವೇಶನವನ್ನು ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಕಮಿಟಿ, ಲೋಕಪೂರ ಇವರಿಗೆ ಲೀಜ್ ಆಧಾರದ ಮೇಲೆ 30 ವರ್ಷಗಳವರೆಗೆ ನೀಡುವ ಕುರಿತಂತೆ, ಆಸ್ತಿ ನಂ.3741, ಕ್ಷೇತ್ರ-400.63 ಚ.ಮೀಟರ್ ಒಂದು ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ ವ್ಯಾಪ್ತಿಯ ಕಾರ್ಯಾಲಯಕ್ಕೆ ಲೀಜ್ ಆಧಾರದ ಮೇರೆಗೆ 30 ವರ್ಷಗಳ ಅವಧಿಗೆ ನೀಡುವ ಕುರಿತು ಜಿಲ್ಲಾಧಿಕಾರಿಯವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರದ ಅಧಿಸೂಚನೆ ದಿನಾಂಕ:24-05-2017 ರನ್ವಯ ನಾಗರೀಕ ಸೌಲಭ್ಯ ನಿವೇಶನ (CA Sites)ಗಳನ್ನು ಕೆಳಕಂಡ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಅವಕಾಶ ಇರುತ್ತದೆ.

(d) "Civic Amenity Site' means a site earmarked for Civic amenity in a layout approved by the Planning Authority under section 17:

(c) "Civic Amenity" means,-

1. The following Civic Amenities provided by the Central or State Government Department, Statutory body and Local Authority, namely:-

(a) (i) Water supply installation including treatment plants, Storage reservoirs and intermediate pumping stations;

(ii) Drainage and sanitary installations including Septic Tanks, Soak Pits and local Sewage Treatment Plants;

(iii) Sub-stations and Transformer yards;

(iv) Garbage collection, segregation and recycling centres; and

(v) Public Toilets.

(b) (i) Health facilities and Educational institutions;

(ii) Markets, Milk booth and fair price shop;

(iii) Bus stations.

(iv) Area office or a service station of the local authority of the Karnataka Urban Water Supply and Drainage Board or the Electricity Supply Companies (ESCOMs) and other utilities providing Government Departments and Statutory Bodies providing Public Utilities.

(v) Post office and Bank

(vi) Gymnasiums and Libraries: and

(vii) Police station and Fire Station

(c) Central or State Government office, Recreation centers, Religious and Cultural activity centers; and

(d) Anganavadi Centers and Hostels run by the State Government.

2. Convention centers built and rum by the local authority.
3. Amenity run by an institution on non-profitable basis like Educational Institutions and Health facilities run on non-profitable nature, Religious and Cultural activity centers, Charitable of philanthropic services: and
4. any such other amenities that the Government may by notification specify.

ಮೇಲೆ ತಿಳಿಸಿರುವ ಅಂಶಗಳನ್ವಯ ಸರ್ಕಾರದ ಅಧಿಸೂಚನೆ ದಿನಾಂಕ: 24.05.2017 ರನ್ವಯ ನಾಗರೀಕ ಸೌಲಭ್ಯ ನಿವೇಶನ (CA Sites)ಗಳನ್ನು ಹಂಚಿಕೆ ಮಾಡಲು ಬಾಗಲಕೋಟೆ ಜಿಲ್ಲೆ, ಲೋಕಾಪೂರ ಪಟ್ಟಣದ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಆಸ್ತಿ ನಂ.3741, ಕ್ಷೇತ್ರ-400.63 ಚ.ಮೀಟರ್ ನಿವೇಶನವನ್ನು ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್ ಕಮಿಟಿ, ಲೋಕಾಪೂರ ಇವರಿಗೆ ಲೀಜ್ ಆಧಾರದ ಮೇಲೆ 30 ವರ್ಷಗಳವರೆಗೆ ನೀಡಲು ನಿಯಮದಲಿ ಅವಕಾಶವಿರುವುದಿಲ್ಲವೆಂಬುದು ಈ ಇಲಾಖೆಯ ಅಭಿಪ್ರಾಯವಾಗಿದೆ

**(ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವರಿಂದ ಅನುಮೋದಿತ.)**

(ಕೆ.ಎಲ್. ಅಶೋಕ್) 04/8/25
ಸರ್ಕಾರದ ಅಪರ ಕಾರ್ಯದರ್ಶಿ-1
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸರ್ಕಾರದ ಕಾರ್ಯದರ್ಶಿಯವರು,
ನಗರಾಭಿವೃದ್ಧಿ ಇಲಾಖೆ

ಆಡಳಿತ ಇಲಾಖೆಯು 1) ಅಣ್ಣಿಗೇರಿ, 2) ಅಫಜಲಪೂರ, 3) ಮಾಗಡಿ ಮತ್ತು 4) ನವಲಗುಂದ ಈ ನಾಲ್ಕು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಮಾಡಲು ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಪ್ರಸ್ತಾವನೆಯ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಕೋರಿರುತ್ತದೆ.

ಸರ್ಕಾರದ ಅಧಿಸೂಚನೆ ದಿನಾಂಕ:24-05-2017 ರಲ್ಲಿ ಹೊರಡಿಸಲಾದ The Karnataka Planning Authorities (Allotment of Civic Amenity sites) Rules, 2016 ರ ನಿಯಮ (2)ರಲ್ಲಿ ಪ್ರಸ್ತಾಪಿಸಿರುವ ಉದ್ದೇಶಗಳಿಗೆ ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ನಗರ ಸ್ಥಳೀಯ ಸಂಸ್ಥೆ ಮಾಲೀಕತ್ವದ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಲು ಅವಕಾಶವಿರುವುದಿಲ್ಲ.

ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02-06-2003ರಲ್ಲಿ ಕೆಳಕಂಡಂತೆ ತಿಳಿಸಲಾಗಿದೆ;

> "ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಗುತ್ತಿಗೆ ಆಧಾರದ ಮೇಲೆ ಮೂಲಕವೇ ನೀಡುವುದು. ಅಧಿಕಾರವನ್ನುಪಯೋಗಿಸಿ ಸ್ವತ್ತುಗಳನ್ನು ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು"

ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02-06-2003ರಲ್ಲಿ ನೀಡಿರುವ ಮಾರ್ಗಸೂಚಿಯನ್ವಯ ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿರುವ ನಿವೇಶನಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ಮಾತ್ರ ಗುತ್ತಿಗೆ ನೀಡಲು ಅವಕಾಶವಿದ್ದು, ಇದನ್ನು ಹೊರತುಪಡಿಸಿ ನಗರ ಸ್ಥಳೀಯ ಸಂಸ್ಥೆಗಳ ಜಾಗವನ್ನು ಮಂಜೂರು ಮಾಡಲು/ ರಿಯಾಯತಿ ದರದಲ್ಲಿ ನೀಡಲು ಅವಕಾಶವಿರುವುದಿಲ್ಲ.

ಮೇಲೆ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಡಳಿತ ಇಲಾಖೆಯು ಪ್ರಸ್ತಾಪಿಸಿರುವಂತೆ, 1) ಅಣ್ಣಿಗೇರಿ, 2) ಅಫಜಲಪೂರ, 3) ಮಾಗಡಿ ಮತ್ತು

4) ನವಲಗುಂದ ಈ ನಾಲ್ಕು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಭವನ ಕಟ್ಟಡ ನಿರ್ಮಾಣ ಮಾಡಲು ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂಬುದು ಕಾನೂನು ಇಲಾಖೆಯ ಅಭಿಪ್ರಾಯವಾಗಿದೆ.

**(ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವರಿಂದ ಅನುಮೋದಿತ.)**

(ಕೆ.ಎಲ್. ಅಶೋಕ್) 11/9/25
ಸರ್ಕಾರದ ಅಪರ ಕಾರ್ಯದರ್ಶಿ-1
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸರ್ಕಾರದ ಕಾರ್ಯದರ್ಶಿಯವರು,
ನಗರಾಭಿವೃದ್ಧಿ ಇಲಾಖೆ

ಲಾ/ಅಭಿಪ್ರಾಯ/801/2025 ಕಾನೂನು ಇಲಾಖೆ(ಅಭಿಪ್ರಾಯ)

UDD/24/TMD/2025(PART-1) ದಿನಾಂಕ:20.11.2025

ಆಡಳಿತ ಇಲಾಖೆಯು ವಿವಿಧ ನಗರ ಸ್ಥಳೀಯ ಸಂಸ್ಥೆಗಳ ಮತ್ತು ನಗರ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಲಭ್ಯವಿರುವ ನಿವೇಶನಗಳನ್ನು ಬ್ಲಾಕ್ ಕಾಂಗ್ರೆಸ್ ಕಛೇರಿ ನಿರ್ಮಾಣ ಮಾಡುವ ಸಲುವಾಗಿ ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ಲೀಸ್ ಆಧಾರದ ಮೇಲೆ ಮಂಜೂರು ಮಾಡುವ ಕುರಿತು ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿರುತ್ತದೆ.

ಈ ಕೆಳಕಂಡ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿರುತ್ತದೆ.

a. ಶಿಕಾರಿಪುರ ಪುರಸಭೆ ವ್ಯಾಪ್ತಿಯ 15ನೇ ವಾರ್ಡಿನ ಹಳಿಯೂರು ಹೊಸಕೇರಿ ರಾಘವೇಂದ್ರ ಸ್ವಾಮಿ ಮಠದ ವ್ಯಾಪ್ತಿಯ ಶಿಕಾರಿಪುರ ಪುರಸಭೆ ಮಾಲೀಕತ್ವದ ಖಾತೆ ಸಂಖ್ಯೆ: 243/243/225 ಸ್ವತ್ತಿನ ಅಳತೆ, (90+94)/2*(225+230)/2 ಮತ್ತು (78+87)/2*(197+230)/2 ಅಡಿಯಲ್ಲಿ ಅಳತೆ 40*60 ಅಡಿ ನಿವೇಶನವನ್ನು ಬಿಟ್ಟು ಉಳಿದ ಸಂಪೂರ್ಣ ಅಳತೆಯ ಜಾಗವನ್ನು ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡಲು 30 ವರ್ಷದ ಅವಧಿಗೆ ರಿಯಾಯಿತಿ ದರದಲ್ಲಿ ಲೀಸ್ / ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡುವ ಕುರಿತು.
b. ಅನವಟ್ಟಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಕೆ.ಎಂ.ಎಫ್ 24 ಸರ್ವೆ ನಂ 8/16ರ ಕೃಷಿ ಜಮೀನು ಮಾನ್ಯ ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆಗೊಂಡಿದ್ದು, ಸದರಿ ಜಾಗದಲ್ಲಿ ಮೀಸಲಿಟ್ಟಿರುವ ಸಾರ್ವಜನಿಕ ಜಾಗದ ಖಾತೆಯು ಹಾಲಿ ಪಟ್ಟಣ ಪಂಚಾಯಿತಿಯಲ್ಲಿ ದಾಖಲಿದ್ದು, ಸದರಿ ಜಾಗದಲ್ಲಿ 30.01+13.00=390.13 ಚದರ ಮೀಟರ್ ವಿಸ್ತೀರ್ಣದ ನಿವೇಶನವನ್ನು ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡಲು ರಿಯಾಯಿತಿ ದರದಲ್ಲಿ ಮಂಜೂರು ಮಾಡುವ ಕುರಿತು.
c. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪುರಸಭೆ ವ್ಯಾಪ್ತಿಯಲ್ಲಿನ ಹೊಳಲ್ಕೆರೆ ಪುರಸಭೆ ಠಾಣೆಯ ಹಿಂಭಾಗದಲ್ಲಿರುವ ಖಾತಾ ಸಂಖ್ಯೆ: 213 ವಿಸ್ತೀರ್ಣ 80*90 ಅಡಿ ಅಳತೆಯ ಜಾಗವನ್ನು ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡಲು ರಿಯಾಯಿತಿ ದರದಲ್ಲಿ ಮಂಜೂರು ಮಾಡುವ ಕುರಿತು.
d. **ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ಪುರಸಭೆ ವ್ಯಾಪ್ತಿಯ ಗುತ್ತಿಗೇರಿ ಗ್ರಾಮದ ಬಿನ್‌ಶೇತ್ಕಿ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟಿರುವ ಪುರಸಭೆ ಮಾಲೀಕತ್ವದ ಸಿಟಿಎಸ್ ನಂ. 3417 ಫ/39ರಲ್ಲಿ ಒಟ್ಟು 420.00 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ 29 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಕುರಿತು.**
e. ರಾಯಚೂರು ಜಿಲ್ಲೆ, ಮಾನವಿ ತಾಲ್ಲೂಕಿನ ಮಾನವಿ ಗ್ರಾಮದ ಸ.ನಂ. 422/2/ಅ-1 ರಲ್ಲಿ ಕ್ಷೇತ್ರ: 2ಎ-15ಗುಂಟೆ ವಿಸ್ತೀರ್ಣದ ಬಹುನಿವೇಶನ ವಿನ್ಯಾಸದಲ್ಲಿ ಕಾಯ್ದಿರಿಸಿದ 303.00 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಹಂಚಿಕೆ ಮಾಡುವ ಕುರಿತು.
f. ಯಾದಗಿರಿ ಜಿಲ್ಲೆ, ಶಹಾಪೂರ ತಾಲ್ಲೂಕಿನ ಹಳಿಸಗರ ಗ್ರಾಮದ ಸ.ನಂ. 527/*/4, ಸ.ನಂ. 529/*/2, ಸ.ನಂ. 527/*/1 ಮತ್ತು ಸ.ನಂ. 527/*/5 ರ ಬಹು ನಿವೇಶನ ವಿನ್ಯಾಸದಲ್ಲಿನ ಒಟ್ಟು 2175.26 ಚ.ಮೀ. ವಿಸ್ತೀರ್ಣವುಳ್ಳ ನಾಗರಿಕ ಸೌಲಭ್ಯ

ನಿವೇಶನವನ್ನು, ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಹಂಚಿಕೆ ಮಾಡುವ ಕುರಿತು

1. ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ.62/1 ರಲ್ಲಿ 02ಎಕರೆ 04ಗುಂಟೆ ಸ.ನಂ.62/2 ರಲ್ಲಿ 01ಎಕರೆ 10ಗುಂಟೆ ಸ.ನಂ.62/3 ರಲ್ಲಿ 01ಎಕರೆ-28ಗುಂಟೆ ಸ.ನಂ 63/1 ರಲ್ಲಿ 00ಎಕರೆ39ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಸ.ನಂ 63/2 ರಲ್ಲಿ 02ಎಕರೆ 04ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಮತ್ತು ಸ.ನಂ.63/3 ರಲ್ಲಿ 01ಎಕರೆ-22ಗುಂಟೆ (02ಗುಂಟೆ 'ಎ' ಖರಾಬು ಸೇರಿದೆ) ಒಟ್ಟು 08ಎಕರೆ ವಿಸ್ತೀರ್ಣದ ವಿನ್ಯಾಸದಲ್ಲಿ ಕಾಯ್ದಿರಿಸಿರುವ 1816.38ಚ.ಮೀ ವಿಸ್ತೀರ್ಣದ ನಿವೇಶನವನ್ನು, ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಬೆಂಗಳೂರು ಇವರಿಗೆ ಹಂಚಿಕೆ ಮಾಡುವ ಕುರಿತು.

The Karnataka Planning Authorities (Allotment of Civic Amenity sites) Rules, 2016 ರ ನಿಯಮ 3ರನ್ವಯ ಪ್ರಾಧಿಕಾರವು ನಾಗರಿಕ ಸೌಲಭ್ಯ ನಿವೇಶನಗಳನ್ನು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆಗಳು, ಸ್ವಾಯತ್ತ ಸಂಸ್ಥೆಗಳು ಮತ್ತು ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಂಜೂರಾತಿ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

The Karnataka Planning Authorities (Allotment of Civic Amenity sites) Rules, 2016 ರ ನಿಯಮ 2(f) ರನ್ವಯ "Institution" ಎಂಬ ಪದದ ವ್ಯಾಖ್ಯಾನದಲ್ಲಿ ದತ್ತಿ ಉದ್ದೇಶಕ್ಕಾಗಿ ಸ್ಥಾಪಿತವಾದ ಅಂದರೆ ಶೈಕ್ಷಣಿಕ, ಧಾರ್ಮಿಕ ಅಥವಾ ಸಾಮಾಜಿಕ ಉದ್ದೇಶಕ್ಕಾಗಿ ಸ್ಥಾಪಿತವಾದ ಸಂಸ್ಥೆ.

ಆಡಳಿತ ಇಲಾಖೆಯು ಮಂಜೂರಾತಿಗಾಗಿ ಪ್ರಸ್ತಾಪಿಸಿರುವ ಸಂಸ್ಥೆಯು The Karnataka Planning Authorities (Allotment of Civic Amenity sites) Rules, 2016 ರ ನಿಯಮ 2(f) ರಲ್ಲಿ ವ್ಯಾಖ್ಯಾನಿಸಿರುವ "Institution" ಎಂಬ ಪದದ ವ್ಯಾಖ್ಯಾನದಡಿಯಲ್ಲಿ ಬರುವುದಿಲ್ಲ.

ಆದುದರಿಂದ ಆಡಳಿತ ಇಲಾಖೆಯು ತಿಳಿಸಿರುವ ಮೇಲ್ಕಂಡ ಏಳು ನಾಗರಿಕ ಸೌಲಭ್ಯ ನಿವೇಶನಗಳನ್ನು, ಕಾಂಗ್ರೆಸ್ ಭವನ ಟ್ರಸ್ಟ್, ಬೆಂಗಳೂರು ಇವರಿಗೆ ರಿಯಾಯಿತಿ ದರದಲ್ಲಿ ಮಂಜೂರು / ಹಂಚಿಕೆ ಮಾಡಲು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಬೆಎಂಡಿ 2002 ದಿನಾಂಕ 02.06.2003 ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 27 ಬೆಟಿಪಿ 2017 ದಿನಾಂಕ: 24.05.2017ರನ್ವಯ ಮತ್ತು ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಲಾದ

ಲಾ/ಅಭಿಪ್ರಾಯ/801/2025
UDD/24/TMD/2025(PART-1)

ನಿವೇಶನಗಳನ್ನು Karnataka Planning Authorities (Allotment of Civic amenity sites) Rules, 2016 ರನ್ವಯ ಮಂಜೂರು ಮಾಡಲು ಅವಕಾಶವಿರುವುದಿಲ್ಲವೆಂಬುದು ಕಾನೂನು ಇಲಾಖೆಯ ಅಭಿಪ್ರಾಯವಾಗಿದೆ.

**(ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವರಿಂದ ಅನುಮೋದಿತ.)**

(ಕೆ.ಎಲ್. ಅಶೋಕ್) 20/11/25
ಸರ್ಕಾರದ ಅಪರ ಕಾರ್ಯದರ್ಶಿ-1
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಸರ್ಕಾರದ ಕಾರ್ಯದರ್ಶಿಯವರು,
ನಗರಾಭಿವೃದ್ಧಿ ಇಲಾಖೆ

## ನಗರಸಭಾ ಕಾರ್ಯಾಲಯ ಗೌರಿಬಿದನೂರು, ಚಿಕ್ಕಬಳ್ಳಾಪುರ ಜಿಲ್ಲೆ,

Website:-www.gowribidanurtown.gov.in
E-Mail :-itstaff_ulb_gouribidanur@yahoo.co.in Phone NO:08155-286427

ಕ್ರಮಸಂಖ್ಯೆ:ನ.ಸ.ಗೌ/ಕಂ.ಶಾ/197/2024-25 ದಿನಾಂಕ:.12.03.2025

ರವರಿಗೆ,

ಸದಸ್ಯ ಕಾರ್ಯದರ್ಶಿ
ಯೋಜನಾ ಪ್ರಾಧಿಕಾರ
ಗೌರಿಬಿದನೂರು
ಚಿಕ್ಕಬಳ್ಳಾಪುರ ಜಿಲ್ಲೆ

ಮಾನ್ಯರೇ,

ವಿಷಯ:- ಗೌರಿಬಿದನೂರು ನಗರದ ಹಿರೇಬಿದನೂರು ಗ್ರಾಮದ ಸ.ನಂ.62/1, 62/2, 63/1, 63/2, 63/3ರಲ್ಲಿ ಒಟ್ಟು 1816.38 ಚದರ ಅಡಿ ವಿಸ್ತೀರ್ಣದ ನಿವೇಶನದಲ್ಲಿ ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್ ಭವನದ ಕಟ್ಟಡ ನಿರ್ಮಾಣ ಮಾಡಲು ಕೋರಿರುವ ಬಗ್ಗೆ.

ಉಲ್ಲೇಖ:-
1. ಡಾ॥ ಎಂ.ಸಿ.ಸುಧಾಕರ್, ಎಂ.ಡಿ.ಎಸ್, ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಚಿಕ್ಕಬಳ್ಳಾಪುರ ಜಿಲ್ಲೆ ಕರ್ನಾಟಕ ಸರ್ಕಾರ ರವರ ಟಿಪ್ಪಣಿ ಪತ್ರದ ಸಂಖ್ಯೆ:ಉಶಿಸ/118/2025 ದಿನಾಂಕ:04.03.2025. ಈ ಕಛೇರಿಗೆ ಪತ್ರ ಸ್ವೀಕೃತಗೊಂಡ ದಿನಾಂಕ:11.03.2025.
2. ತಮ್ಮ ಕಛೇರಿಯ ಪತ್ರದ ಸಂಖ್ಯೆ:ಗೌಯೋಪ್ರಾ/ಇತರೆ/2024-25 /293 ದಿನಾಂಕ:10.12.2024.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಕಸಬಾ ಹೋಬಳಿಯ ಹಿರೇಬಿದನೂರು ಗ್ರಾಮದ ಸ.ನಂ.62/1, 62/2, 63/1, 63/2, 63/3, 1816.38 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ಹಾಲಿ ಚಾಲ್ತಿಯಲ್ಲಿರುವ ನಿಯಮಗಳನ್ವಯ ನಾಗರೀಕ ಸೌಕರ್ಯಗಳಿಗಾಗಿ ನಿವೇಶನವನ್ನು ಮೀಸಲಿರಿಸಿರುವ ಜಾಗದ ನಿವೇಶನವನ್ನು ಕಾಂಗ್ರೆಸ್ ಭವನ್ ಟ್ರಸ್ಟ್‌ನ ಕಟ್ಟಡ ನಿರ್ಮಿಸಲು ಮಂಜೂರು ಮಾಡುವ ಸಂಬಂಧ ಸದರಿ ನಿವೇಶನದ ಒಟ್ಟು 03/2023 ಮೌಲ್ಯದ ಶೇ.10ರಷ್ಟು ಹಣವನ್ನು ಪ್ರಾರಂಭಿಕ ಠೇವಣಿಯಾಗಿ ಪಾವತಿಸಿಕೊಳ್ಳದ ಷರತ್ತಿಗೊಳಪಟ್ಟು, ನಿವೇಶನ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪ್ರಾಧಿಕಾರದ ಸಭೆಯಲ್ಲಿ ಪರಿಗಣಿಸಿ, 1816.38 ಚದರ ಅಡಿ ವಿಸ್ತೀರ್ಣದ ನಿವೇಶನವನ್ನು ಕಾಂಗ್ರೆಸ್ ಭವನ್ ಟ್ರಸ್ಟ್‌ಗೆ **"ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್ ಭವನದ"** ಕಟ್ಟಡ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಸಂಪೂರ್ಣ ಉಚಿತವಾಗಿ ಮಂಜೂರು ಮಾಡುವಂತೆ ಡಾ॥ ಎಂ.ಸಿ.ಸುಧಾಕರ್, ಎಂ.ಡಿ.ಎಸ್, ಮಾನ್ಯ ಉನ್ನತ ಶಿಕ್ಷಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಚಿಕ್ಕಬಳ್ಳಾಪುರ ಜಿಲ್ಲೆ ಕರ್ನಾಟಕ ಸರ್ಕಾರ ರವರ ಟಿಪ್ಪಣಿ ಪತ್ರದಲ್ಲಿ ತಿಳಿಸಿರುತ್ತಾರೆ.

ಈ ಬಗ್ಗೆ ಪರಿಗಣಿಸಿ ಸಂಬಂಧಿತ ಸ.ನಂಬರ್‌ಗಳಾದ ಸ.ನಂ.62/1, 62/2, 63/1, 63/2, 63/3ರಲ್ಲಿ ಒಟ್ಟು 1816.38 ಚದರ ಅಡಿ ವಿಸ್ತೀರ್ಣದ ನಿವೇಶನ ಜಾಗವು ತಮ್ಮ ಗೌರಿಬಿದನೂರು ಯೋಜನಾ ಪ್ರಾಧಿಕಾರದ ಪರಿಮಿತಿಯಲ್ಲಿ ಇರುವುದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಮಾನ್ಯ ಗೌರವಾನ್ವಿತ ಸಚಿವರ ಗಮನಕ್ಕೆ ತರುವಂತೆ ತಮ್ಮಲ್ಲಿ ಕೋರುತ್ತಾ ತಿಳಿಸಿದೆ

ತಮ್ಮ ವಿಶ್ವಾಸಿ

ಪೌರಾಯುಕ್ತರು,
ನಗರಸಭೆ, ಗೌರಿಬಿದನೂರು

| ಕ್ರಸಂ | ಬಡಾವಣೆಯ ಹೆಸರು | ಅಳತೆ ಚ.ಮೀಗಳಲ್ಲಿ | ದರ ಪ್ರತಿ ಚ.ಮೀ.ಗೆ ರೂಗಳಲ್ಲಿ | ನಿವೇಶನದ ಒಟ್ಟು ಮೌಲ್ಯ ರೂಗಳಲ್ಲಿ | ಶೇ.5 ರಿಯಾಯಿತಿಯಂತೆ ನಿವೇಶನದ ಮೌಲ್ಯ ರೂ.ಗಳಲ್ಲಿ | ನೋಂದಣಿ ಶುಲ್ಕ | ಒಟ್ಟು |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಹಿರೇಬಿದನೂರು | 1816.38 | 6000/- | 1,08,98,280/- | 5,45,000/- | 5000/- | 5,50,000/- |

| ಕ್ರ. ಸಂ. | ಗ್ರಾಮ/ಬಡಾವಣೆ/ವಾರ್ಡ್/ರಸ್ತೆ/ಟಿ.ಟಿ.ಎಸ್/UPOR ವ್ಯಾಪ್ತಿ | Village/Layout/Road Name | ಸ್ಥಳೀಯ ಸಂಸ್ಥೆ ವ್ಯಾಪ್ತಿಯ ಅಥವಾ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಹಾಗೂ ಗೃಹ ನಿರ್ಮಾಣ ಸಂಘ ನಿರ್ಮಿಸಿರುವ ವಸತಿ ನಿವೇಶನಗಳು. ಪ್ರತಿ ಚ.ಮೀ ಗೆ ರೂ ಗಳಲ್ಲಿ |
|---|---|---|---|
| 1 | 2 | 3 | 4 |
| 359 | ಅಶ್ವತ್ಥಮ್ಮ ಲೇಔಟ್ | Aswathamma Layout | 6000 |
| 360 | ಎಸ್ ಕೃಷ್ಣಪ್ಪ ಲೇಔಟ್ | S Krishnappa Layout | 6000 |
| 361 | ಸುಬ್ಬರಾಯಪ್ಪ ಲೇಔಟ್ | Subbrayappa Layout | 6000 |
| 362 | ಚಂದ್ರಶೇಖರ್ ಲೇಔಟ್ | Chandrashekar Layout | 6000 |
| 363 | ಸಿ ಅಶ್ವತ್ಥಪ್ಪ ಲೇಔಟ್ | C. Aswathappa Layout | 6000 |
| 364 | ಲಕ್ಷ್ಮಮ್ಮ ಲೇಔಟ್ | Lakshmamma Layout | 6000 |
| 365 | ಡಿ.ಎನ್.ವೆಂಕಟ ರೆಡ್ಡಿ ಲೇಔಟ್ (ಬೈಪಾಸ್ ರಸ್ತೆ ಎಡಭಾಗ ) | D.N Venkatareddy Layout [ Bypas Road Leftr Side] | 6000 |
| 366 | ಆರ್ ಅಶ್ವತ್ಥಪ್ಪ ಲೇಔಟ್ | R.Aswathappa Layout | 6000 |
| 367 | ಡಿ.ಎನ್.ವೆಂಕಟ ರೆಡ್ಡಿ ಲೇಔಟ್ (ಬೈಪಾಸ್ ರಸ್ತೆ ಬಲಬಾಗ) | D.N.Venkatareddy Layout [Byas Road Right Side] | 6000 |
| 368 | ರಾಮಲಿಂಗೇಶ್ವರ ಬಡಾವಣೆ | Ramalingeswara Layout | 6000 |
| 369 | ಆರ್ ಅಶೋಕ್ ಕುಮಾರ್ ಲೇಔಟ್ | R.Ashok Kumar Layout | 6000 |
| 370 | ಹನುಮಂತಪ್ಪ ಲೇಔಟ್ | Hnumanthappa Layout | 6000 |
| 371 | ಶೈಲಜಾ ಲೇಔಟ್ | Shylaja Layout | 6000 |
| 372 | ಸುಂದರ್ ರಾಜ್ ಲೇಔಟ್ | Sundraja Layout | 6000 |
| 373 | ಪ್ರಕಾಶ್ ಲೇಔಟ್ | Praksh Layout | 6000 |
| 374 | ಕೆ.ಎಸ್ ಆರ್.ಟಿ.ಸಿ. ಬಸ್ ಡಿಪೋ ಪಕ್ಕ ಲೇಔಟ್ | Atched layout K.S.R.T.C Bus Dipo | 6000 |
| 375 | ಎ.ಎನ್.ವೇಣು ಲೇಔಟ್ | A N Venu Layout | 6000 |
| 376 | ಇಂಡಸ್ಟ್ರಿಯಲ್ ಏರಿಯಾ | industrial Area | 6000 |
| 377 | ಅಫಿಷಿಯಲ್ ಲೇಔಟ್ | Official Layout | 6000 |
| 378 | ಷಫೀಖ್ ಖಾನ್ ಲೇಔಟ್ | Shafiq Khan Layout | 6000 |
| 379 | ಸವಿತ ಲೇಔಟ್ | Svitha Layout | 6000 |

**ಶಹಾಪೂರ ನಗರ ಯೋಜನಾ ಪ್ರಾಧಿಕಾರದ 03 ನೇ ಸಾಮಾನ್ಯ ಸಭೆ ದಿನಾಂಕ: 22.01.2026 ರ ವಿಷಯಸೂಚಿ**

**ವಿಷಯ-04** ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಹಳಿಸಗರ ಗ್ರಾಮದ ಸರ್ವೆ ನಂ: 527/*/4 ರಲ್ಲಿ 01 ಎಕರೆ 10 ಗುಂಟೆ, ಸ.ನಂ: 529/*/2 ರಲ್ಲಿ 05 ಎಕರೆ 00 ಗುಂಟೆ, ಸ.ನಂ: 527/*/1 ರಲ್ಲಿ 07 ಎಕರೆ 31 ಗುಂಟೆ, ಸ.ನಂ: 527/*/5 ರಲ್ಲಿ 01 ಎಕರೆ 10 ಗುಂಟೆ, ಹೀಗೆ ಒಟ್ಟು ವಿಸ್ತೀರ್ಣ: 15 ಎಕರೆ 11 ಗುಂಟೆ ಜಮೀನಿನಲ್ಲಿ ಬರುವ 2175.26 ಚ.ಮೀ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಇಂದಿರಾ ಗಾಂದಿ ಭವನ, ನಂ-12, ಜಸ್ಮಾ ರಸ್ತೆ, ಬೆಂಗಳೂರು ಇವರಿಗೆ ಮಂಜೂರು ಮಾಡುವ ಬಗ್ಗೆ.

**ಟಿಪ್ಪಣಿ:-** ಸರ್ಕಾರದ ಆದೇಶ ಸಂಖ್ಯೆ: ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 24 ಟಿಎಂಡಿ 2025 (ಇ), ಬೆಂಗಳೂರು, ದಿನಾಂಕ:15.12.2025 ರಂತೆ ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಹಳಿಸಗರ ಗ್ರಾಮದ ಸರ್ವೆ ನಂ: 527/*/4 ರಲ್ಲಿ 01 ಎಕರೆ 10 ಗುಂಟೆ, ಸ.ನಂ: 529/*/2 ರಲ್ಲಿ 05 ಎಕರೆ 00 ಗುಂಟೆ, ಸ.ನಂ: 527/*/1 ರಲ್ಲಿ 07 ಎಕರೆ 31 ಗುಂಟೆ, ಸ.ನಂ: 527/*/5 ರಲ್ಲಿ 01 ಎಕರೆ 10 ಗುಂಟೆ, ಹೀಗೆ ಒಟ್ಟು ವಿಸ್ತೀರ್ಣ: 15 ಎಕರೆ 11 ಗುಂಟೆ ಜಮೀನಿನಲ್ಲಿ ಬರುವ 2175.26 ಚ.ಮೀ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಇಂದಿರಾ ಗಾಂದಿ ಭವನ, ನಂ-12, ಜಸ್ಮಾ ರಸ್ತೆ, ಬೆಂಗಳೂರು ಇವರಿಗೆ ನಿವೇಶನ ಮಾರುಕಟ್ಟೆ ಮೌಲ್ಯದ ಶೇ:5% ರಷ್ಟು ದರವನ್ನು ವಿದಿಸಿ ಕಛೇರಿ ಕಟ್ಟದ ನಿರ್ಮಾಣ ಉದ್ದೇಶಕ್ಕಾಗಿ ಖಾಯಂ ಆಗಿ ಮಂಜೂರು ಮಾಡಿ ಆದೇಶಿಸಿದೆ.

ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಇಂದಿರಾ ಗಾಂದಿ ಭವನ, ನಂ-12, ಜಸ್ಮಾ ರಸ್ತೆ, ಬೆಂಗಳೂರು ಇವರು ಈ ಕೆಳಕಂಡಂತೆ ದಿನಾಂಕ:02.01.2026 ರಂದು ಶುಲ್ಕ ಪಾವತಿಸಿರುತ್ತಾರೆ.

| | | |
|---|---|---|
| 1) ಸಿ.ಎ ನಿವೇಶನ ಶುಲ್ಕ :2175.26 ಚ.ಮೀ. x ರೂ.4405 | = | 95,82,020.00 |
| 2) ಸರ್ಕಾರ ಸುತ್ತೋಲೆಯಂತೆ 05 % ರಷ್ಟು ಮೊತ್ತ | = | 4,79,110.00 |
| 3) ಬ್ಯಾಂಕ್‌ಚಾರ್ಜ: | = | 60.00 |
| **ಒಟ್ಟು** | = | **4,79,170.00** |

(ಅಕ್ಷರಗಳಲ್ಲಿ. ನಾಲ್ಕು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಒಂದು ನೂರಾ ಎಪ್ಪತ್ತು ರೂಪಾಯಿಗಳು ಮಾತ್ರ)

ಕಾರಣ ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಇಂದಿರಾ ಗಾಂದಿ ಭವನ, ನಂ-12, ಜಸ್ಮಾ ರಸ್ತೆ, ಬೆಂಗಳೂರು ಇವರಿಗೆ ಸದರಿ ನಿವೇಶನವನ್ನು ಸರ್ಕಾರದಿಂದ ಮಂಜೂರಾತಿ ಆಗಿರುವುದನ್ನು ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದೆ.

**ನಿರ್ಣಯ:-** ಟಿಪ್ಪಣಿಯಲ್ಲಿ ವಿವರಿಸಿದ ಅಂಶವನ್ನು ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಲಾಗಿ ಶಹಾಪೂರ ತಾಲ್ಲೂಕಿನ ಹಳಿಸಗರ ಗ್ರಾಮದ ಸರ್ವೆ ನಂ: 527/*/4 ರಲ್ಲಿ 01 ಎಕರೆ 10 ಗುಂಟೆ, ಸ.ನಂ: 529/*/2 ರಲ್ಲಿ 05 ಎಕರೆ 00 ಗುಂಟೆ, ಸ.ನಂ: 527/*/1 ರಲ್ಲಿ 07 ಎಕರೆ 31 ಗುಂಟೆ, ಸ.ನಂ: 527/*/5 ರಲ್ಲಿ 01 ಎಕರೆ 10 ಗುಂಟೆ, ಹೀಗೆ ಒಟ್ಟು ವಿಸ್ತೀರ್ಣ: 15 ಎಕರೆ 11 ಗುಂಟೆ ಜಮೀನಿನಲ್ಲಿ ಬರುವ ಬರುವ 2175.26 ಚ.ಮೀ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಇಂದಿರಾ ಗಾಂದಿ ಭವನ, ನಂ-12, ಜಸ್ಮಾ ರಸ್ತೆ, ಬೆಂಗಳೂರು ಇವರಿಗೆ ಸರ್ಕಾರದಿದ ಮಂಜೂರಿಸಿ ಆಧೇಶಿಸಿದನ್ನು ಸಾಮಾನ್ಯ ಸಭೆಯಲ್ಲಿ ಸರ್ವಾನುಮತದಿಂದ ಅನುಮೋದಿಸಿ ನಿರ್ಣಯಿಸಲಾಯಿತು.

ಸಹಿ/-
ಸದಸ್ಯ ಕಾರ್ಯದರ್ಶಿ
ನಗರ ಯೋಜನಾ ಪ್ರಾಧಿಕಾರ,
ಶಹಾಪೂರ

ಸಹಿ/-
ಅಧ್ಯಕ್ಷರು
ನಗರ ಯೋಜನಾ ಪ್ರಾಧಿಕಾರ,
ಶಹಾಪೂರ

ದೃಢೀಕೃತ ಪ್ರತಿ

ಸದಸ್ಯ ಕಾರ್ಯದರ್ಶಿ
ನಗರ ಯೋಜನಾ ಪ್ರಾಧಿಕಾರಿ
ಶಹಾಪೂರ

ನಗರ ಯೋಜನಾ ಪ್ರಾಧಿಕಾರ ಕಛೇರಿ
...ಬಿಲ್ಡಿಂಗ್, ...ಬ್ಯಾಂಕ್ ಎದುರುಗಡೆ,
...ರಸ್ತೆ ಶಹಾಪೂರ-585223

# ನಗರ ಯೋಜನಾ ಪ್ರಾಧಿಕಾರ, ಶಹಾಪೂರ

## ಇಂದಿರ ನಗರ ಗ್ಯಾರೇಜ್ ಲೈನ್ ಶಹಾಪೂರ

**ತಾ॥ ಶಹಾಪೂರ ಜಿ॥ ಯಾದಗಿರಿ e-mail :tpashpr@gmail.com**

---

ಸಂ:ನ.ಯೋ.ಪ್ರಾ.ಶ/ಸಿ.ಎ.ಸೈಟ್/2025-26/530 ದಿನಾಂಕ:26.12.2025

**ಸಿ.ಎ ಸೈಟ್ ಶುಲ್ಕ ಪಾವತಿ ತಿಳುವಳಿಕೆ ಪತ್ರ**

ಇವರಿಗೆ.

ಶ್ರೀ ವಿಜಯ.ಕೆ.ಮುಲಗುಂಡ ಟ್ರಸ್ಟಿ
ಕಾಂಗ್ರೆಸ್ ಭವನ ಟ್ರಸ್ಟ್ (ರಿ),
ಇಂದಿರಾ ಗಾಂದಿ ಭವನ, ನಂ-12, ಜಸ್ಮಾ ರಸ್ತೆ,
ಬೆಂಗಳೂರು-560052

ಮಾನ್ಯರೆ,

ವಿಷಯ:-ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಹಳಿಸಗರ ಗ್ರಾಮದ ಸರ್ವೆ ನಂಬರ್:527/*/4, 529/*/2, 527/*/1 ಮತ್ತು 527/*/5 ರಲ್ಲಿಯ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ನಿವೇಶನ ಹಂಚಿಕೆ ಮಾಡಲು 5% ರಷ್ಟು ಮೊತ್ತದ ಶುಲ್ಕವನ್ನು ಪ್ರಾಧಿಕಾರಕ್ಕೆ ಸಂದಾಯಿಸುವ ಬಗ್ಗೆ.

**ಉಲ್ಲೇಖ:**-1) ತಮ್ಮ ಮನವಿ ಪತ್ರ ದಿನಾಂಕ:20.02.2025
2) ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 24 ಟಿಎಂಡಿ 2025 (ಇ), ಬೆಂಗಳೂರು, ದಿನಾಂಕ:15.12.2025

---***---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1) ರಲ್ಲಿ ಯಾದಗಿರಿ ಜಿಲ್ಲೆಯ ಶಹಾಪೂರ ತಾಲೂಕಿನ ಹಳಿಸಗರ ಗ್ರಾಮದ ಸರ್ವೆ ನಂಬರ್:527/*/4, 529/*/2, 527/*/1 ಮತ್ತು 527/*/5 ರಲ್ಲಿಯ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ನಿವೇಶನವನ್ನು ಶ್ರೀ ವಿಜಯ.ಕೆ.ಮುಲಗುಂಡ ಟ್ರಸ್ಟಿ ಕಾಂಗ್ರೆಸ್ ಭವನ ಟ್ರಸ್ಟ್ (ರಿ), ಇಂದಿರಾ ಗಾಂದಿ ಭವನ, ನಂ-12, ಜಸ್ಮಾ ರಸ್ತೆ, ಬೆಂಗಳೂರು ಇವರಿಗೆ ನಿವೇಶನ ಮಂಜೂರು ಮಾಡಲು ಕೋರಲಾಗಿದೆ.

ಅದರಂತೆ ಉಲ್ಲೇಖ (2) ರ ಸರ್ಕಾದ ಅಧಿಸೂಚನೆಯಂತೆ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿಟ್ಟ ನಿವೇಶನವನ್ನು ಹಂಚಿಕೆ ಮಾಡಲು ಈ ಸಂಬಂಧ ಉಪ-ನೋಂದಣಾಧಿಕಾರಿಗಳು, ಶಹಾಪೂರ, ರವರ ಕಚೇರಿಯಿಂದ ಮಾರುಕಟ್ಟೆ ಮೌಲ್ಯ ದೃಢೀಕರಣ ಪತ್ರದನ್ವಯ (ಹಳಿಸಗರ ಗ್ರಾಮಕ್ಕೆ ರೂ.4400/ಚ.ಮೀ) ಕೆಳಕಂಡ ಶುಲ್ಕಗಳನ್ನು ಈ ಪ್ರಾಧಿಕಾರಕ್ಕೆ ಪಾವತಿಸಲು ಈ ಮೂಲಕ ತಿಳಿಯಪಡಿಸಲಾಗಿದೆ.

| | | |
|---|---|---|
| 1) ಸಿ.ಎ ನಿವೇಶನ ಶುಲ್ಕ :2175.26 ಚ.ಮೀ. x ರೂ.4405 | = | 95,82,020.00 |
| 2) ಸರ್ಕಾರ ಸುತ್ತೋಲೆಯಂತೆ 05 % ರಷ್ಟು | = | 4,79,110.00 |
| 3) ಬ್ಯಾಂಕ್ ಚಾರ್ಜ: | = | 60.00 |
| ಒಟ್ಟು | = | **4,79,170.00** |

(ಅಕ್ಷರಗಳಲ್ಲಿ, ನಾಲ್ಕು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಒಂದು ನೂರಾ ಎಪ್ಪತ್ತು ರೂಪಾಯಿಗಳು ಮಾತ್ರ)

O/C ... 2-1-2026

ತಮ್ಮ ವಿಶ್ವಾಸಿ
26.12.25
ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ
ಶಹಾಪೂರ.

ಪುರಸಭೆ ಕಾರ್ಯಾಲಯ, ಮಾನವಿ

Town Municipal Council, Manvi Website:
http//:www.manvitown.mrc.gov.in District:Raichur, Karnataka,Pin: 584123
Email: itstaff_ulb_manvi@yahoo.co.in, Phone no: 08538-220700

ದಿನಾಂಕ: 04-08-2022 ರಂದು ಬೆಳಿಗ್ಗೆ 11.00 ಮಾನ್ಯ ಗೌರವಾನ್ವಿತ ಪುರಸಭ ಅಧ್ಯಕ್ಷರಾದ ಘಂಟೆಗೆ ಶ್ರೀಮತಿ. ರಶೀದಾಬೇಗಂ ಅಧ್ಯಕ್ಷರು ಪುರಸಭೆ ಮಾನವಿ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಾಮಾನ್ಯ ಸಭೆಯ ನಡುವಳಿಕೆಗಳು.

| | |
|---|---|
| ವಿಷಯ ಸಂಖ್ಯೆ:94 | ಸರ್ಕಾರಿ ಇಲಾಖೆ & ವಿವಿಧ ಸಂಘ ಸಂಸ್ಥೆಗಳಿಂದ ನಾಗರೀಕ ಸೌಲಭ್ಯ ನಿವೇಶನ ಕೋರಿ ಬಂದ ಅರ್ಜಿಗಳ ಬಗ್ಗೆ ಚರ್ಚೆ.<br>1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸ್ತ್ರೀಶಕ್ತ ಭವನಕ್ಕೆ ಪಟ್ಟಣದಲ್ಲಿ ನಾಗರೀಕ ಸೌಲಭ್ಯ ನಿವೇಶನ ಒದಗಿಸಿ ಕೊಡುವ ಕುರಿತು.<br>2) ಜನಸೇವಾ ಗ್ರಾಮೀಣಾಭಿವೃದ್ಧಿ ಸಂಸ್ಥೆ ಕಟ್ಟಡ ನಿರ್ಮಾಣಕ್ಕೆ ನಾಗರೀಕ ಸೌಲಭ್ಯ ನಿವೇಶನ ಒದಗಿಸುವ ಕುರಿತು.<br>3) ಸಂಕಲ್ಪ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಮಾನವಿ (ರಿ) ನಮ್ಮ ಸಂಸ್ಥೆಯ ಕಾರ್ಯಾಲಯದ ಕಟ್ಟಡ ನಿರ್ಮಾಣಕ್ಕೆ ನಾಗರೀಕ ಸೌಲಭ್ಯ ನಿವೇಶನ ಒದಗಿಸುವ ಕುರಿತು.<br>4) ತಾಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಾರ್ಯಾಲಯ ಮಾನವಿ ಪಟ್ಟಣದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣ ಮಾಡಲು ನಾಗರೀಕ ಸೌಲಭ್ಯ ನಿವೇಶನ ಒದಗಿಸುವ ಕುರಿತು.<br>5) ಕಾಂಗ್ರೆಸ ಭವನ ಟ್ರಸ್ಟ(ರಿ) ರವರಿಗೆ ಸಿ.ಎ. ನಿವೇಶನ ಒದಗಿಸುವ ಬಗ್ಗೆ. |
| ನಿರ್ಣಯ ಸಂಖ್ಯೆ:94 | ಸದರಿ ವಿಷಯಗಳು 1 ರಿಂದ 5 ಸಭೆಗೆ ಮುಖ್ಯಾಧಿಕಾರಿಗಳು ವಿವವರಿಸಲಾಗಿ ಸಭೆಯಲ್ಲಿ ಉಪಸ್ಥಿತರಿದ್ದ ಉಪಸ್ಥಿತರಿದ್ದ ಶ್ರೀಮತಿ. ಲಕ್ಷ್ಮೀದೇವಿ ನಾಯಕ, ಮಾಜಿ ಅಧ್ಯಕ್ಷರು ಹಾಲಿ ಸದಸ್ಯರು ರವರು ಮಾತನಾಡಿ ಕ್ರ.ಸಂ: 01 ,4 ಮತ್ತು 5 ರಲ್ಲಿ ನಾಗರೀಕ ಸೌಲಭ್ಯ ನಿವೇಶನ ಮಂಜೂರಾತಿ ಮಾಡಲು ಸಭೆಯು ಒಪ್ಪಿಗೆ ನೀಡಲು ಕೋರಿದರು ಆಗ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.<br>ಹಾಗು ಕ್ರಮ ಸಂ.2 ಮತ್ತು 3 ರ ಪ್ರಸ್ತಾವನೆಯ ಕೋರಿಕೆಯಂತೆ ನಾಗರೀಕ ಸೌಲಭ್ಯಗಳ ಮಂಜೂರಾತಿಗೆ ಮುಂದಿನ ಸಭೆಯಲ್ಲಿ ಸೂಕ್ತ ದಾಖಲೆಗಳೊಂದಿಗೆ ಮಂಡಿಸಲು ಒಪ್ಪಿಗೆ ಇರುವುದಾಗಿ ತಿಳಿಸಿದರು, ಇದಕ್ಕ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿ ನಿರ್ಣಯಿಸಲಾಯಿತು. |

"ದೃಢೀಕರಿಸಿದೆ"

ಮುಖ್ಯಾಧಿಕಾರಿ
ಪುರಸಭೆ, ಮಾನವಿ

ಸಹಿ/-
ಅಧ್ಯಕ್ಷರು,
ಪುರಸಭೆ.ಮಾನವಿ

Scanned by CamScanner

2024-25 ನೇ ಸಾಲಿನ ಹಳೆಯ LIC ಆಫೀಸ್ ಹತ್ತಿರ ಬರುವ ಶ್ರೀಮಾತಾ ಕಾಲೋನಿ (ಬಳಂತಾನ) ನಿವೇಶನ/ವಾಣಿಜ್ಯ. ಪಟ್ಟಿಕೆ ಮಾರ್ಗಸೂಚಿ

| | | | | | | | | |
|---|---|---|---|---|---|---|---|---|
| 279 | ಶ್ರೀ ಮಾತಾ ಕಾಲೋನಿ | Sri Mata Colony | | | | 5300/— | ಚ.ಮೀ. | |
| | ವಾಣಿಜ್ಯ | commercial | | | | 12500/— | | |

ಹಿರಿಯ ಉಪನೋಂದಣಾಧಿಕಾರಿಗಳು
ಪರಿಶೀಲಿಸಿ ಮಾಡಿದೆ.

ಉಪ ನೋಂದಣಾಧಿಕಾರಿಗಳು
ಮಾನ್ವಿ ಜಿ॥ ರಾಯಚೂರು

Scanned by CamScanner

**ದಿನಾಂಕ:29.08.2025 ರಂದು ಪೂರ್ವಾಹ್ನ 04.00 ಘಂಟೆಗೆ ಗೌರಿಬಿದನೂರು ಯೋಜನಾ ಪ್ರಾಧಿಕಾರದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆದ ಪ್ರಾಧಿಕಾರದ 32ನೇ ಸಾಮಾನ್ಯ ಸಭೆಯ ನಡವಳಿಯ ಉದ್ಧೃತ ಭಾಗ.**

**ವಿಷಯ ಸಂಖ್ಯೆ:13** **ಗೌರಿಬಿದನೂರು ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನವನ್ನು ಗೌರಿಬಿದನೂರು ತಾಲ್ಲೂಕು ಕಾಂಗ್ರೇಸ್ ಭವನದ ಕಟ್ಟಡ ನಿರ್ಮಾಣ ಮಾಡಲು ಕೋರಿರುವ ಬಗ್ಗೆ.**

**ಟಿಪ್ಪಣಿ:** ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ. 62/1 ರಲ್ಲಿ 02ಎಕರೆ-04ಗುಂಟೆ, ಸ.ನಂ. 62/2 ರಲ್ಲಿ 01ಎಕರೆ-10ಗುಂಟೆ, ಸ.ನಂ. 62/3 ರಲ್ಲಿ 01ಎಕರೆ-28ಗುಂಟೆ, ಸ.ನಂ. 63/1 ರಲ್ಲಿ 00ಎಕರೆ-39ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಸ.ನಂ. 63/2 ರಲ್ಲಿ 02ಎಕರೆ-04ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಮತ್ತು ಸ.ನಂ. 63/3 ರಲ್ಲಿ 01ಎಕರೆ-22ಗುಂಟೆ (02ಗುಂಟೆ 'ಎ' ಖರಾಬು ಸೇರಿದೆ) ಒಟ್ಟು 08ಎಕರೆ-39ಗುಂಟೆ ವಿಸ್ತೀರ್ಣದ ವಿನ್ಯಾಸದಲ್ಲಿ ಕಾಯ್ದಿರಿಸಿರುವ 1816.38ಚ.ಮೀ ವಿಸ್ತೀರ್ಣದ ನಿವೇಶನವನ್ನು ಹಾಲಿ ಚಾಲ್ತಿಯಲ್ಲಿರುವ ನಿಯಮಗಳನ್ವಯ ನಾಗರೀಕ ಸೌಲಭ್ಯದ ನಿವೇಶನವನ್ನು ಕಾಂಗ್ರೆಸ್ ಭವನದ ಟ್ರಸ್ಟನ ಕಟ್ಟಡ ನಿರ್ಮಿಸಲು ಮಂಜೂರು ಮಾಡುವ ಸಂಬಂಧ ಸದರಿ ನಿವೇಶನದ ಒಟ್ಟು ಮೌಲ್ಯದ ಶೇ. 10ರಷ್ಟು ಹಣವನ್ನು ಪ್ರಾರಂಭಿಕ ಠೇವಣಿಯಾಗಿ ಪಾವತಿಸಿಕೊಳ್ಳದ ಷರತ್ತಿಗೊಳಪಟ್ಟು, ನಿವೇಶನ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪ್ರಾಧಿಕಾರದ ಸಭೆಯಲ್ಲಿ ಪರಿಗಣಿಸಿ, 1816.38 ಚ.ಮೀ. ವಿಸ್ತೀರ್ಣದ ನಿವೇಶನವನ್ನು ಕಾಂಗ್ರೆಸ್ ಭವನದ ಟ್ರಸ್ಟಗೆ "**ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್ ಭವನದ**" ಕಟ್ಟಡ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಸಂಪೂರ್ಣ ಉಚಿತವಾಗಿ ಮಂಜೂರು ಮಾಡುವಂತೆ ಅಧ್ಯಕ್ಷರು, ಚಿಕ್ಕಬಳ್ಳಾಪುರ ಜಿಲ್ಲೆ, ಕಾಂಗ್ರೇಸ್ ಸಮಿತಿ ರವರು ಕೋರಿದ್ದು, ಈ ಸಂಬಂಧ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳನ್ವಯ/ ಅಧಿಸೂಚನೆ ಹಾಗೂ ಸುತ್ತೋಲೆಯನ್ವಯ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.

ಅದರಂತೆ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರಂತೆ ಸರ್ಕಾರಿ ಕಚೇರಿಗಳು, ಸರ್ಕಾರ ಸ್ಥಾಪಿತ ಸಂಸ್ಥೆಗಳಿಗೆ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರಸ್ತುತ ಸಾಲಿನ ನೋಂದಣಿ ಶುಲ್ಕದಂತೆ ನಿವೇಶನದ ಮೌಲ್ಯವನ್ನು ನಿಗದಿಪಡಿಸಿ ನಿಯಮಾವಳಿಯಂತೆ ಶೇ. 50% ರಷ್ಟು ರಿಯಾಯಿತಿಯಂತೆ 30 ವರ್ಷಗಳ ಅವಧಿಗೆ ಭೋಗ್ಯ (ಲಿಸ್) ಮುಖಾಂತರ ಹಂಚಿಕೆ ಮಾಡಲು ಮಾತ್ರ ನಿಯಮಾವಳಿಯಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರಂತೆ ನಾಗರೀಕ ಸೌಲಭ್ಯ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಆದ ಕಾರಣ ಸದರಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಯಾಗಿರುವ ಬಡಾವಣೆಯಲ್ಲಿನ 1816.38. ಚ.ಮೀ ವಿಸ್ತೀರ್ಣದ ನಾಗರೀಕ ಸೌಲಭ್ಯ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡಲು ಕೋರಿರುವ ಮನವಿಯ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ.

**ಸಭಾ ನಿರ್ಣಯ:** ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯಲ್ಲಿ ಓದಿ ವಿಷಯದ ಬಗ್ಗೆ ಪರಿಶೀಲಿಸಿ ಕೂಲಂಕುಶವಾಗಿ ಚರ್ಚಿಸಲಾಯಿತು. ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ. 62/1 ರಲ್ಲಿ 02ಎಕರೆ-04ಗುಂಟೆ, ಸ.ನಂ. 62/2 ರಲ್ಲಿ 01ಎಕರೆ-10ಗುಂಟೆ, ಸ.ನಂ. 62/3 ರಲ್ಲಿ 01ಎಕರೆ-28ಗುಂಟೆ, ಸ.ನಂ. 63/1 ರಲ್ಲಿ 00ಎಕರೆ-39ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ), ಸ.ನಂ. 63/2 ರಲ್ಲಿ 02ಎಕರೆ-04ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಮತ್ತು ಸ.ನಂ. 63/3 ರಲ್ಲಿ 01ಎಕರೆ-22ಗುಂಟೆ (02ಗುಂಟೆ 'ಎ' ಖರಾಬು ಸೇರಿದೆ) ಒಟ್ಟು 08ಎಕರೆ-39ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಅಭಿವೃದ್ಧಿ ಪಡಿಸಿರುವ ಖಾಸಗಿ ಬಡಾವಣೆಯಲ್ಲಿ 1816.38 ಚ.ಮೀ. ವಿಸ್ತೀರ್ಣದ ನಿವೇಶನವನ್ನು ನಾಗರೀಕ ಸೌಲಭ್ಯಕ್ಕೆ ಕಾಯ್ದಿರಿಸಲಾಗಿರುವ ನಿವೇಶನದಲ್ಲಿ "ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್ ಭವನದ" ನಿರ್ಮಾಣ ಮಾಡಲು ಹಾಗೂ ನಾಗರೀಕ ಸೌಲಭ್ಯ ನಿವೇಶನಗಳು ಪ್ರಾಧಿಕಾರದ ಪ್ರಮುಖ ಆದಾಯದ ಮೂಲವಾಗಿದ್ದು, ಸ್ವಯಂ ಹಣಕಾಸು ಸಂಸ್ಥೆಯಾಗಿರುವುದರಿಂದ ಈ ರೀತಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅವಕಾಶ ಇರುವುದಿಲ್ಲವೆಂದು ಸದಸ್ಯ ಕಾರ್ಯದರ್ಶಿ ರವರು ಸಭೆಗೆ ತಿಳಿಸಿದರು. ಆದರೆ ಮಾನ್ಯ ಜಿಲ್ಲಾ ಅಧ್ಯಕ್ಷರು (ಜಿಲ್ಲಾ ಕಾಂಗ್ರೇಸ್ ಸಮಿತಿ) ಚಿಕ್ಕಬಳ್ಳಾಪುರ ರವರು ಮತ್ತು ಕಾಂಗ್ರೇಸ್ ಭವನ ಟ್ರಸ್ಟ ರವರ ಕೋರಿಕೆಯಂತೆ ಸಂಕೀರ್ಣಗಳು, ಸಮ್ಮೇಳನಗಳು, ಕಾರ್ಯಗಾರಗಳು, ಉಪನ್ಯಾಸ, ಚರ್ಚೆಗಳು, ಪ್ರಚಾರ ಸಭೆಗಳು ಮತ್ತು ಇತರೆ ಸಭೆಗಳನ್ನು ನಡೆಸಲು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿಗಳು, ಗಣಕಯಂತ್ರ ತರಬೇತಿ, ಟೈಲರಿಂಗ್ ತರಬೇತಿ ಮತ್ತು ಮೊಬೈಲ್ ರಿಪೇರಿ ತರಬೇತಿಗಳನ್ನು ನಡೆಸಲು ಉಚಿತವಾಗಿ ಹಂಚಿಕೆ ಮಾಡಲು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಸೂಚನೆಯಂತೆ ಪ್ರಾರಂಭಿಕ ಠೇವಣಿ ಇಲ್ಲದೆ ಸರ್ಕಾರಕ್ಕೆ ಅನುಮೋದನೆಗೆ ಸಲ್ಲಿಸಲು ತಿಳಿಸುತ್ತಾ, ಸರ್ಕಾರಕ್ಕೆ

ಪೂರ್ಣ ರಿಯಯಾತಿಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು. ಅದರಂತೆ ಪೂರ್ಣ ರಿಯಾಯತಿ ದರದಲ್ಲಿ ಕಾಂಗ್ರೇಸ್ ಭವನ ಟ್ರಸ್ಟ್‌ಗೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.

| | |
|---|---|
| ಸಹಿ/- | ಸಹಿ/- |
| ಸದಸ್ಯಕರ್ಯದರ್ಶಿ. | ಅಧ್ಯಕ್ಷರು |
| ಗೌರಿಬಿದನೂರು ಯೋಜನಾ ಪ್ರಾಧಿಕಾರ, | ಗೌರಿಬಿದನೂರು ಯೋಜನಾ ಪ್ರಾದಿಕಾರ. |
| ಗೌರಿಬಿದನೂರು | ಗೌರಿಬಿದನೂರು |

"ಪ್ರತಿ"

09/09/2025

ಸದಸ್ಯ ಕಾರ್ಯದರ್ಶಿ
ಗೌರಿಬಿದನೂರು ಯೋಜನಾ ಪ್ರಾಧಿಕಾರ
ಗೌರಿಬಿದನೂರು

| | |
|---|---|
| **ಟಿಪ್ಪಣಿ:** | ವಿಷಯಕ್ಕೆ ಸಂಬಂಧಿಸಿದಂತೆ, ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ. 62/1 ರಲ್ಲಿ 02ಎಕರೆ-04ಗುಂಟೆ, ಸ.ನಂ. 62/2 ರಲ್ಲಿ 01ಎಕರೆ-10ಗುಂಟೆ, ಸ.ನಂ. 62/3 ರಲ್ಲಿ 01ಎಕರೆ-28ಗುಂಟೆ, ಸ.ನಂ. 63/1 ರಲ್ಲಿ 00ಎಕರೆ-39ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಸ.ನಂ. 63/2 ರಲ್ಲಿ 02ಎಕರೆ-04ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಮತ್ತು ಸ.ನಂ. 63/3 ರಲ್ಲಿ 01ಎಕರೆ-22ಗುಂಟೆ (02ಗುಂಟೆ 'ಎ' ಖರಾಬು ಸೇರಿದೆ) ಒಟ್ಟು 08ಎಕರೆ-39ಗುಂಟೆ ವಿಸ್ತೀರ್ಣದ ವಿನ್ಯಾಸದಲ್ಲಿ ಕಾಯ್ದಿರಿಸಿರುವ 1816.38ಚ.ಮೀ ವಿಸ್ತೀರ್ಣದ ನಿವೇಶನವನ್ನು ಹಾಲಿ ಚಾಲ್ತಿಯಲ್ಲಿರುವ ನಿಯಮಗಳನ್ವಯ ನಾಗರೀಕ ಸೌಲಭ್ಯದ ನಿವೇಶನವನ್ನು ಕಾಂಗ್ರೆಸ್ ಭವನದ ಟ್ರಸ್ಟ್‌ನ ಕಟ್ಟಡ ನಿರ್ಮಿಸಲು ಮಂಜೂರು ಮಾಡುವ ಸಂಬಂಧ ಸದರಿ ನಿವೇಶನದ ಒಟ್ಟು ಮೌಲ್ಯದ ಶೇ. 10ರಷ್ಟು ಹಣವನ್ನು ಪ್ರಾರಂಭಿಕ ಠೇವಣಿಯಾಗಿ ಪಾವತಿಸಿಕೊಳ್ಳದ ಷರತ್ತಿಗೊಳಪಟ್ಟು, ನಿವೇಶನ ಕೋರಿ ಸಲ್ಲಿಸಿರುವ ಅರ್ಜಿಯನ್ನು ಪ್ರಾಧಿಕಾರದ ಸಭೆಯಲ್ಲಿ ಪರಿಗಣಿಸಿ, 1816.38 ಚ.ಮೀ. ವಿಸ್ತೀರ್ಣದ ನಿವೇಶನವನ್ನು ಕಾಂಗ್ರೆಸ್ ಭವನದ ಟ್ರಸ್ಟ್‌ಗೆ "**ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್ ಭವನದ**" ಕಟ್ಟಡ ನಿರ್ಮಾಣ ಮಾಡುವ ಉದ್ದೇಶಕ್ಕಾಗಿ ಸಂಪೂರ್ಣ ಉಚಿತವಾಗಿ ಮಂಜೂರು ಮಾಡುವಂತೆ ಅಧ್ಯಕ್ಷರು, ಚಿಕ್ಕಬಳ್ಳಾಪುರ ಜಿಲ್ಲೆ, ಕಾಂಗ್ರೆಸ್ ಸಮಿತಿ ರವರು ಕೋರಿದ್ದು, ಈ ಸಂಬಂಧ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳನ್ವಯ/ ಅಧಿಸೂಚನೆ ಹಾಗೂ ಸುತ್ತೋಲೆಯನ್ವಯ ನಿಯಮಾನುಸಾರ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿರುತ್ತಾರೆ.<br>ಅದರಂತೆ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರಂತೆ ಸರ್ಕಾರಿ ಕಚೇರಿಗಳು, ಸರ್ಕಾರ ಸ್ಥಾಪಿತ ಸಂಸ್ಥೆಗಳಿಗೆ ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರಸ್ತುತ ಸಾಲಿನ ನೋಂದಣಿ ಶುಲ್ಕದಂತೆ ನಿವೇಶನದ ಮೌಲ್ಯವನ್ನು ನಿಗಧಿಪಡಿಸಿ ನಿಯಮಾವಳಿಯಂತೆ ಶೇ. 50% ರಷ್ಟು ರಿಯಾಯಿತಿಯಂತೆ 30 ವರ್ಷಗಳ ಅವಧಿಗೆ ಭೋಗ್ಯ (ಲಿಸ್) ಮುಖಾಂತರ ಹಂಚಿಕೆ ಮಾಡಲು ಮಾತ್ರ ನಿಯಮಾವಳಿಯಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ. ಆದರೆ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು 2016 ರಂತೆ ನಾಗರೀಕ ಸೌಲಭ್ಯ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಆದ ಕಾರಣ ಸದರಿ ವಸತಿ ವಿನ್ಯಾಸ ನಕ್ಷೆ ಅನುಮೋದನೆಯಾಗಿರುವ ಬಡಾವಣೆಯಲ್ಲಿನ 1816.38. ಚ.ಮೀ ವಿಸ್ತೀರ್ಣದ ನಾಗರೀಕ ಸೌಲಭ್ಯ ನಿವೇಶನವನ್ನು ಉಚಿತವಾಗಿ ಮಂಜೂರು ಮಾಡಲು ಕೋರಿರುವ ಮನವಿಯ ವಿಷಯವನ್ನು ಪ್ರಾಧಿಕಾರದ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕೆ ಮಂಡಿಸಿದೆ. |
| **ಸಭಾ ನಿರ್ಣಯ:** | ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಲಾದ ಟಿಪ್ಪಣಿಯಲ್ಲಿ ಒದಿ ವಿಷಯದ ಬಗ್ಗೆ ಪರಿಶೀಲಿಸಿ ಕೂಲಂಕುಶವಾಗಿ ಚರ್ಚಿಸಲಾಯಿತು. ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಹಿರೇಬಿದನೂರು ಗ್ರಾಮದ ಸ.ನಂ. 62/1 ರಲ್ಲಿ 02ಎಕರೆ-04ಗುಂಟೆ, ಸ.ನಂ. 62/2 ರಲ್ಲಿ 01ಎಕರೆ-10ಗುಂಟೆ, ಸ.ನಂ. 62/3 ರಲ್ಲಿ 01ಎಕರೆ-28ಗುಂಟೆ, ಸ.ನಂ. 63/1 ರಲ್ಲಿ 00ಎಕರೆ-39ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ), ಸ.ನಂ. 63/2 ರಲ್ಲಿ 02ಎಕರೆ-04ಗುಂಟೆ (01ಗುಂಟೆ 'ಎ' ಖರಾಬು ಸೇರಿದೆ) ಮತ್ತು ಸ.ನಂ. 63/3 ರಲ್ಲಿ 01ಎಕರೆ-22ಗುಂಟೆ (02ಗುಂಟೆ 'ಎ' ಖರಾಬು ಸೇರಿದೆ) ಒಟ್ಟು 08ಎಕರೆ-39ಗುಂಟೆ ವಿಸ್ತೀರ್ಣದ ಜಮೀನಿನಲ್ಲಿ ಅಭಿವೃದ್ಧಿ ಪಡಿಸಿರುವ ಖಾಸಗಿ ಬಡಾವಣೆಯಲ್ಲಿ 1816.38 ಚ.ಮೀ. ವಿಸ್ತೀರ್ಣದ ನಿವೇಶನವನ್ನು ನಾಗರೀಕ ಸೌಲಭ್ಯಕ್ಕೆ ಕಾಯ್ದಿರಿಸಲಾಗಿರುವ ನಿವೇಶನದಲ್ಲಿ "ಗೌರಿಬಿದನೂರು ತಾಲ್ಲೂಕು ಕಾಂಗ್ರೆಸ್ ಭವನದ" ನಿರ್ಮಾಣ ಮಾಡಲು ಹಾಗೂ ನಾಗರೀಕ ಸೌಲಭ್ಯ ನಿವೇಶನಗಳು ಪ್ರಾಧಿಕಾರದ ಪ್ರಮುಖ ಅದಾಯದ ಮೂಲವಾಗಿದ್ದು, ಸ್ವಯಂ ಹಣಕಾಸು ಸಂಸ್ಥೆಯಾಗಿರುವುದರಿಂದ ಈ ರೀತಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅವಕಾಶ ಇರುವುದಿಲ್ಲವೆಂದು ಸದಸ್ಯ ಕಾರ್ಯದರ್ಶಿ ರವರು ಸಭೆಗೆ ತಿಳಿಸಿದರು. ಆದರೆ ಮಾನ್ಯ ಜಿಲ್ಲಾ ಅಧ್ಯಕ್ಷರು (ಜಿಲ್ಲಾ ಕಾಂಗ್ರೇಸ್ ಸಮಿತಿ) ಚಿಕ್ಕಬಳ್ಳಾಪುರ ರವರು ಮತ್ತು ಕಾಂಗ್ರೇಸ್ ಭವನ ಟ್ರಸ್ಟ್ ರವರ ಕೋರಿಕೆಯಂತೆ ಸಂಕೀರ್ಣಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಉಪನ್ಯಾಸ, ಚರ್ಚೆಗಳು, ಪ್ರಚಾರ ಸಭೆಗಳು ಮತ್ತು ಇತರೆ ಸಭೆಗಳನ್ನು ನಡೆಸಲು ಹಾಗೂ ಕೌಶಲ್ಯಾಭಿವೃದ್ಧಿ ತರಬೇತಿಗಳು, ಗಣಕಯಂತ್ರ ತರಬೇತಿ, ಟೈಲರಿಂಗ್ ತರಬೇತಿ ಮತ್ತು ಮೊಬೈಲ್ ರಿಪೇರಿ ತರಬೇತಿಗಳನ್ನು ನಡೆಸಲು ಉಚಿತವಾಗಿ ಹಂಚಿಕೆ ಮಾಡಲು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಸೂಚನೆಯಂತೆ ಪ್ರಾರಂಭಿಕ ಠೇವಣಿ ಇಲ್ಲದೆ ಸರ್ಕಾರಕ್ಕೆ ಅನುಮೋದನೆಗೆ ಸಲ್ಲಿಸಲು ತಿಳಿಸುತ್ತಾ, ಸರ್ಕಾರಕ್ಕೆ ಪೂರ್ಣ ರಿಯಯಾತಿಗೆ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು. ಅದರಂತೆ ಪೂರ್ಣ ರಿಯಯಾತಿ ದರದಲ್ಲಿ ಕಾಂಗ್ರೇಸ್ ಭವನ ಟ್ರಸ್ಟ್‌ಗೆ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು. |
| **ವಿಷಯ ಸಂಖ್ಯೆ:14** | **ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಕಸಬಾ ಹೋಬಳಿ, ಕಲ್ಲೂಡಿ ಗ್ರಾಮದ ಸ.ನಂ.132 ರಲ್ಲಿ 124ಎಕರೆ-06ಗುಂಟೆ ವಿಸ್ತೀರ್ಣದ ಕೆರೆಯನ್ನು ಅಭಿವೃದ್ಧಿ ಪಡಿಸುವ ಬಗ್ಗೆ.** |



Scanned with OKEN Scanner

| | |
|---|---|
| | [illegible] |
| ವಿಷಯ ಸಂಖ್ಯೆ:13 | ಗೌರಿಬಿದನೂರು ಯೋಜನಾ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನವನ್ನು ಗೌರಿಬಿದನೂರು ತಾಲ್ಲೂಕು ಕಾಂಗ್ರೇಸ್ ಭವನದ ಕಟ್ಟಡ ನಿರ್ಮಾಣ ಮಾಡಲು ಕೋರಿರುವ ಬಗ್ಗೆ. |

(1)

# ಪುರಸಭೆ ಕಾರ್ಯಾಲಯ ಹಳಿಯಾಳ (ಉ.ಕ.) 581329

**TOWN MUNICIPAL COUNCIL HALIYAL UTTARA KANNADA DISTRICT,KARWAR,-581329**

ನಂ./ಪು.ಸ.ಹ/ಆಡಳಿತ ವಿಭಾಗ/ಸಭೆ/ವಿಪ/ /2024-25 **ದಿನಾಂಕ: 03-09-2025**

ದಿನಾಂಕ:-05-03-2025 ರಂದು ಬುದವಾರ ಮುಂಜಾನೆ 11:00 ಗಂಟೆಗೆ ಹಳಿಯಾಳ ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಜರುಗಿದ ಮಾಸಿಕ ಸಾಮಾನ್ಯ ಸಭೆಯ ನಡುವಳಿಕೆಗಳು :-

ವಿಷಯ:12/9 ಕಾಂಗ್ರೆಸ ಟ್ರಸ್ಟ ಭವನವನ್ನು ನಿರ್ಮಿಸಲು ಜಾಗೆಯನ್ನು ನೀಡುವ ಕುರಿತು ವಿಚಾರ

ಠರಾವು459 ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಕಟ್ಟಡ ನಿರ್ಮಾಣ ಮಾಡಲು ಉತ್ತರ ಕನ್ನಡ ಜಿಲ್ಲೆಯ ಧಾರವಾಡ ರಸ್ತೆ ಹಳಿಯಾಳ ಪಟ್ಟಣದ ಗುತ್ತಿಗೇರಿ ಗ್ರಾಮದ ಸಿ.ಟಿ.ಎಸ್ ನಂ.3471 ಪ್ಲಾಟ್ ನಂ.39 ರ 420.00 ಸ್ಕೇ.ಮೀ ನಾಗರೀಕ ಸೌಲಭ್ಯದ ಖಾಲಿ ಜಾಗೆ ಮಂಜೂರಿಸಲು ಮಾನ್ಯ ಶ್ರೀ. ವಿಜಯ ಮುಳಗುಂದ ಟ್ರಸ್ಟಿಗಳು, ಕಾಂಗ್ರೆಸ್ ಭವನ ಟ್ರಸ್ಟ್ (ರಿ) ಇಂದಿರಾಗಾಂಧಿ ಭವನ ನಂ.12 ಜಾಸ್ಮಿನ್ ಭವನ ರೋಡ ಬೆಂಗಳೂರು-560052 ರವರು ದಿ:-25-02-2025 ರಂದು ಅರ್ಜಿಯನ್ನು ಸಲ್ಲಿಸಿದರ ಬಗ್ಗೆ ಮಾನ್ಯ ಸರ್ವ ಸದಸ್ಯರಿಗೆ ಓದಿ ಹೇಳಲಾಗಿ ಹಾಗೂ ಸದರ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಕಟ್ಟಡ ನಿರ್ಮಾಣದಿಂದ ಕಾರ್ಮಿಕರ ಅನುಕೂಲಕ್ಕಾಗಿ ಸೆಮಿನಾರ್‌ಗಳು, ಸಮ್ಮೇಳನಗಳು, ಕಾರ್ಯಾಗಾರಗಳು, ಉಪನ್ಯಾಸಗಳು, ಚರ್ಚೆಗಳು, ಪ್ರವಾಸಗಳು ಮತ್ತು ಇತರ ಸಭೆಗಳನ್ನು ನಡೆಸಲು ಸೂಕ್ತವಾದ ಕಟ್ಟಡವನ್ನು ನಿರ್ಮಿಸಲು ಸರಿಯಾದ ಮತ್ತು ಸೂಕ್ತವಾದ ಭೂಮಿಯನ್ನು ಲೀಸ್ ನಿಂದ ಪಡೆಯಲು ಮುಖ್ಯ ಉದ್ದೇಶಗಳ ಅಡಿಯಲ್ಲಿ ಅನೇಕ ಗುರಿ ಮತ್ತು ಉದ್ದೇಶಗಳೊಂದಿಗೆ "ಕಾಂಗ್ರೆಸ ಭವನ ಟ್ರಸ್ಟ್" ಶೈಲಿಯಲ್ಲಿ 1993 ರಲ್ಲಿ ಟ್ರಸ್ಟನ್ನು ನೋಂದಾಯಿಸಲಾಗಿದ್ದು, ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯ ಧಾರವಾಡ ರಸ್ತೆ ಹಳಿಯಾಳ ಪಟ್ಟಣದ ಗುತ್ತಿಗೇರಿ ಗ್ರಾಮದ ಸಿ.ಟಿ.ಎಸ್ ನಂ.3471 ಪ್ಲಾಟ್ ನಂ.39 ರ 420.00 ಸ್ಕೇ.ಮೀ ನಾಗರೀಕ ಸೌಲಭ್ಯದ ಖಾಲಿ ಜಾಗೆಯಲ್ಲಿ ಸದರ ಟ್ರಸ್ಟ್‌ಗೆ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ ಮತ್ತು ಕಂಪ್ಯೂಟರ್ ತರಬೇತಿ ಕೇಂದ್ರವನ್ನು ನಡೆಸಲು ಸದರ ಟ್ರಸ್ಟ್‌ಗೆ ಜಾಗೆಯನ್ನು 29 ವರ್ಷಗಳ ವರೆಗೆ ಲೀಸ್‌ಆಧಾರದ ನೀಡಲು ಬಂದ ಅರ್ಜಿಯನ್ನು ಸಾಮಾನ್ಯ ಸಭೆಯು ವಿಸ್ತೃತವಾಗಿ ಚರ್ಚಿಸಿತು. ಈ ಸಂದರ್ಭದಲ್ಲಿ ಮುಖ್ಯಾಧಿಕಾರಿಗಳು ಸರ್ಕಾರಿ ಸುತ್ತೋಲೆ ಸಂಖ್ಯೆ:ನಅಇ01ಐಎಂಎ2018 ದಿ:-30-01-2018 ರ ನಿಯಮಾವಳಿಗಳನ್ನು ಸಾಮಾನ್ಯ ಸಭೆಯ ಗಮನಕ್ಕೆ ತಂದರು, ಇದರ ಕುರಿತು ಸಭೆಯು ಪುನಃ ಕೂಲಂಕುಷವಾಗಿ ಚರ್ಚಿಸಿ ಗೌರವಾನ್ವಿತ ಎಲ್ಲ ಸದಸ್ಯರು ಸರ್ವಾನುಮತದಿಂದ ಜಾಗೆಯನ್ನು ನೀಡಲು ಒಪ್ಪಿ, ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯಾಧಿಕಾರಿಗಳಿಗೆ ಸೂಚಿಸಿತು.

ಸಹಿ ಇದೆ/-
ಅಧ್ಯಕ್ಷರು
ಪುರಸಭೆ ಹಳಿಯಾಳ(ಉ.ಕ)

"ಯಥಾ ನಕಲು"

ಮುಖ್ಯಾಧಿಕಾರಿ
ಪುರಸಭೆ ಹಳಿಯಾಳ (ಉ.ಕ)

ದೃಢೀಕರಿಸಿದ 03/09/25

ಮುಖ್ಯಾಧಿಕಾರಿ
ಪುರಸಭೆ, ಹಳಿಯಾಳ (ಉ.ಕ.)



ile No. DMA/DEV/OTH/146/2025-DMA_DEV-DIRECTORATE OF MUNICIPAL ADMINISTRATION (Computer No. 1920750)
Generated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 23/09/2025

(3)

# ಪುರಸಭೆ ಕಾರ್ಯಾಲಯ ಹಳಿಯಾಳ (ಉ.ಕ.) 581329

**TOWN MUNICIPAL COUNCIL HALIYAL UTTARA KANNADA DISTRICT,KARWAR,-581329**

ನಂ./ಪು.ಸ.ಹ/ಆಡಳಿತ ವಿಭಾಗ/ಸಭೆ/ವಿವ/ /2025-26 ದಿನಾಂಕ: 03-09-2025

ದಿನಾಂಕ:-09-06-2025 ರಂದು ಸೋಮವಾರ ಮುಂಜಾನೆ 11:00 ಗಂಟೆಗೆ ಹಳಿಯಾಳ ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಜರುಗಿದ ಮಾಸಿಕ ಸಾಮಾನ್ಯ ಸಭೆಯ ನಡುವಳಿಕೆಗಳು :-

ವಿಷಯ: 5 ಹಳಿಯಾಳ ಪುರಸಭೆ ವ್ಯಾಪ್ತಿಯ ಗುತ್ತಿಗೇರಿ ಗ್ರಾಮದ ಬಿನ್‌ಶೇತ್ಕಿ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯದ ಸಿ.ಟಿ.ಎಸ್ ನಂ.3471 ಪ್ಲಾಟ್ ನಂ.39 ರ 420.00 ಸ್ಕೇ.ಮೀ ಜಾಗೆಯನ್ನು 29 ವರ್ಷಗಳ ಅವಧಿಯವರೆಗೆ ಗುತ್ತಿಗೆ ಆಧಾರದ ಮೇಲೆ ಕಾಂಗ್ರೇಸ್ ಭವನ ಟ್ರಸ್ಟ್ ಕಟ್ಟಡ ನಿರ್ಮಾಣ ಮಾಡಲು ಮಂಜೂರಿ ನೀಡುವ ಕುರಿತು.

ಠರಾವು:478 ದಿನಾಂಕ:-05-03-2025 ರಂದು ನಡೆದ ಮಾಸಿಕ ಸಾಮಾನ್ಯ ಸಭೆಯ ಠರಾವ ನಂ.459 ರಂತೆ ಕಾಂಗ್ರೇಸ್ ಭವನ ಟ್ರಸ್ಟ್ ಕಟ್ಟಡ ನಿರ್ಮಾಣ ಮಾಡಲು ಹಳಿಯಾಳ ಪುರಸಭೆ ವ್ಯಾಪ್ತಿಯ ಗುತ್ತಿಗೇರಿ ಗ್ರಾಮದ ಬಿನ್‌ಶೇತ್ಕಿ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯದ ಸಿ.ಟಿ.ಎಸ್ ನಂ.3471 ಪ್ಲಾಟ್ ನಂ.39 ರ ಕ್ಷೇತ್ರ 420.00 ಸ್ಕೇ.ಮೀ ಜಾಗೆಯನ್ನು 29 ವರ್ಷಗಳ ಅವಧಿಯವರೆಗೆ ಗುತ್ತಿಗೆ ಆಧಾರದ ಮೇಲೆ ಮಂಜೂರಿ ಮಾಡಲು ನಾಗರೀಕ ಸೌಲಭ್ಯದ ಕಾಯ್ದಿರಿಸಿದ ಜಾಗೆಯು ಮಾರ್ಗಸೂಚಿ ಬೆಲೆ ಅನುಗುಣವಾಗಿ 29 ವರ್ಷಗಳ ಅವಧಿಗೆ ಲೀಜ್ ನಾಶೆಯಿಂದ ನೀಡುವ ಬಗ್ಗೆ ಸಲಹೆ, ಸೂಚನೆ, ಆಕ್ಷೇಪಣೆ ಆಹ್ವಾನಿಸಿ ಸಾರ್ವಜನಿಕ ಮಾಹಿತಿಗಾಗಿ ದಿ:-28-03-2025 ರ ಸುದ್ದಿಜೇನು ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಿದ್ದು, ನಿಗದಿತ ಅವಧಿಯಲ್ಲಿ ಯಾವುದೇ ಸಲಹೆ, ಸೂಚನೆ, ಆಕ್ಷೇಪಣೆಗಳು ಸ್ವೀಕೃತವಾಗಿದ್ದು ಇರುತ್ತದೆ. ಕಾರಣ ಸದರ ಸರ್ಕಾರದ ಸುತ್ತೋಲೆ

1. ಪೌರಾಡಳಿತ ನಿರ್ದೇಶನಾಲಯ ಬೆಂಗಳೂರು ರವರ ಸುತ್ತೋಲೆ ನಂ. ಪೌನಿಜೆಸಿಎಸ್ ಮಂಡ್ಯ ಜಿಲ್ಲೆ ಸಿ.ಆರ್ 04 2009-10 ದಿನಾಂಕ:-27-08-2009
2. ನಗರಾಭಿವೃದ್ಧಿ ಇಲಾಖೆ ಪೌರಾಡಳಿತ-2 & ಮಂಡಳಿ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ:ನಅಇ-01/ಪಿಎಂಡಿ/2018 ದಿನಾಂಕ:30.01.2018 ಹಾಗೂ ನಅಇ-27/ಟಿಪಿಪಿ/ 2016 ದಿನಾಂಕ:24.05.2017 (01.06.2017 ರ ರಾಜ್ಯಪತ್ರ)
3. ಹಿರಿಯ ಉಪ-ನೋಂದಣಾಧಿಕಾರಿ ಹಳಿಯಾಳ ರವರಿಂದ ಪಡೆದ ಮಾರ್ಗಸೂಚಿ ಬೆಲೆ ಮಾಹಿತಿ ಪತ್ರಿಕೆ ನಮೂನೆ ದಿ:-26-03-2025 ರಲ್ಲಿ ನಮೂದಿಸಿ ಅನುಬಂಧದಂತೆ ವಸತಿಯೇತರ ನಿವೇಶನದ ಪ್ರತಿ ಚದರ ಮೀಟರಿಗೆ ರೂ.4125 ರಂತೆ ಪುರಸಭೆ ವ್ಯಾಪ್ತಿಯ ಬಿನ್‌ಶೇತ್ಕಿ ಬಡಾವಣೆ ವಾರ್ಡ ನಂ.16 ರಲ್ಲಿಯ ಕೋರ್ಲೆಕರ ಲೇಔಟ್ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಸಿ.ಟಿ.ಎಸ್ ನಂ.3471 ಪ್ಲಾಟ್ ನಂ.39 ರ ಕ್ಷೇತ್ರ 420.00 ಸ್ಕೇ.ಮೀ ನಿವೇಶನದ ಬೆಲೆ ರೂ.17,32,500=00 ಆಗುತ್ತದೆ.

ಎಂಬ ವಿಷಯವನ್ನು ಪರಿಶೀಲಿಸಿ ಅರ್ಜಿದಾರರಾದ ಶ್ರೀ. ವಿಜಯ ಮುಳಗುಂದ ಟ್ರಸ್ಟೀ, ಕಾಂಗ್ರೆಸ ಭವನ ಟ್ರಸ್ಟ್ (ರಿ) ಇಂದಿರಾಗಾಂಧಿ ಭವನ ನಂ.12 ಜಾಸ್ಮಾ ಭವನ ರೋಡ ಬೆಂಗಳೂರು ರವರಿಗೆ ಹಳಿಯಾಳ ಪಟ್ಟಣದಲ್ಲಿ ಕೌಶಲ್ಯಾಭಿವೃದ್ಧಿ, ಟೇಲರಿಂಗ್, ಕಂಪ್ಯೂಟರ್ ತರಬೇತಿ, ಮೋಬೈಲ್ ರಿಪೇರಿ ತರಬೇತಿ ನಡೆಸಲು ಮತ್ತು ಕಾರ್ಯಕರ್ತರಿಗೆ ಸೆಮಿನಾರ್, ವರ್ಕ ಶಾಪ್, ಇನ್ನಿತರ ಸಭೆ ಸಮಾರಂಭಗಳನ್ನು ನಡೆಸಲು ಕಾಂಗ್ರೇಸ್ ಭವನ ಟ್ರಸ್ಟ್ ಕಟ್ಟಡ ನಿರ್ಮಾಣಕ್ಕಾಗಿ, ಸರ್ಕಾರದ ಸುತ್ತೋಲೆ ಹಾಗೂ ಮಾರ್ಗಸೂಚಿ ಬೆಲೆಯನ್ನು ಪರಿಗಣಿಸಿ ಸಿ.ಟಿ.ಎಸ್ ನಂ.3471 ಪ್ಲಾಟ್ ನಂ.39 ರ ಕ್ಷೇತ್ರ 420.00 ಸ್ಕೇ.ಮೀ ಜಾಗೆಯನ್ನು 29 ವರ್ಷ ಅವಧಿಗೆ ಗುತ್ತಿಗೆ (ಲೀಜ್) ಆಧಾರದ ಮೇಲೆ ನೀಡಲು ಮಂಜೂರಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳು ಉತ್ತರ ಕನ್ನಡ ಕಾರವಾರ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ಣಯಿಸಲಾಯಿತು.

ಸಹಿ ಇದೆ/-
ಅಧ್ಯಕ್ಷರು
ಪುರಸಭೆ ಹಳಿಯಾಳ(ಉ.ಕ)

"ಯಥಾ ನಕಲು"

ಮುಖ್ಯಾಧಿಕಾರಿ
ಪುರಸಭೆ ಹಳಿಯಾಳ (ಉ.ಕ)

ದೃಢೀಕರಿಸಿದೆ
3/09/25
ಮುಖ್ಯಾಧಿಕಾರಿ
ಪುರಸಭೆ, ಹಳಿಯಾಳ (ಉ.ಕ.)



ile No. DMA/DEV/OTH/146/2025-DMA_DEV-DIRECTORATE OF MUNICIPAL ADMINISTRATION (Computer No. 1920750)
Generated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 23/09/2025

ಪುರಸಭಾ ಕಾರ್ಯಾಲಯ, ಹೊಳಲ್ಕೆರೆ
ಚಿತ್ರದುರ್ಗ ಜಿಲ್ಲೆ, ಕರ್ನಾಟಕ ರಾಜ್ಯ, ಹೊಳಲ್ಕೆರೆ -577526
ಇ-ಮೇಲ್: tpholalkere@yahoo.com
ವೆಬ್‌ಸೈಟ್: www.holalkeretown.mrc.gov.in
ದೂರವಾಣಿ: 08191-275151/200027

ನಂ: ಪು.ಸ,ಹೊ:ಕೌನ್ಸಿಲ್ ಶಾಖೆ: /2025-26

ದಿನಾಂಕ:19.04.2025

## ::ಸಾಮಾನ್ಯ ಸಭೆ ನಡವಳಿಗಳು::

*****

ದಿನಾಂಕ:19/04/2025 ರಂದು ಬೆಳಿಗ್ಗೆ 11-00 ಗಂಟೆಗೆ ಹೊಳಲ್ಕೆರೆ ಪುರಸಭೆ ಕಛೇರಿಯ ಕೌನ್ಸಿಲ್ ಸಭಾಂಗಣದಲ್ಲಿ ಮಾನ್ಯ ಪುರಸಭಾ ಅಧ್ಯಕ್ಷರಾದ ಶ್ರೀ ವಿಜಯಸಿಂಹ ಖಾಟ್ರೋತ್.ಎಲ್ ರವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು.

| | ಒಟ್ಟು | ಹಾಜರಿ | ಗೈರುಹಾಜರಿ |
|---|---|---|---|
| ಚುನಾಯಿತ ಸದಸ್ಯರು | 16 | 15 | 01 |
| ನಾಮನಿರ್ದೇಶಿತ ಸದಸ್ಯರು | 05 | 05 | 00 |
| ಒಟ್ಟು | 21 | 20 | 01 |

*********

| | |
|---|---|
| ವಿಷಯ:(18) | ಶ್ರೀ ವಿಜಯ್ ಮುಳಗುಂದ್, ಕಾಂಗ್ರೆಸ್ ಭವನ್ ಟ್ರಸ್ಟ್(ರಿ), ಬೆಂಗಳೂರುರವರು ಹೊಳಲ್ಕೆರೆ ಪಟ್ಟಣದಲ್ಲಿಯ ನಿವೇಶನವನ್ನು ಟ್ರಸ್ಟ್‌ಗೆ ಮಂಜೂರು ಮಾಡಿಕೊಡುವಂತೆ ಕೋರಿಕೊಂಡಿದ್ದು ಈ ಬಗ್ಗೆ ಚರ್ಚಿಸುವ ವಿಚಾರ |
| ಟಿಪ್ಪಣಿ:(18) | ಸದರಿ ವಿಷಯದ ಬಗ್ಗೆ ಮುಖ್ಯಾಧಿಕಾರಿಗಳು ಮಾತನಾಡಿ ಶ್ರೀ ವಿಜಯ್ ಮುಳಗುಂದ್, ಕಾಂಗ್ರೆಸ್ ಭವನ್ ಟ್ರಸ್ಟ್(ರಿ), ಬೆಂಗಳೂರುರವರು ಹೊಳಲ್ಕೆರೆ ಪಟ್ಟಣದ ಪೊಲೀಸ್ ಠಾಣೆಯ ಹಿಂಭಾಗದಲ್ಲಿರುವ 80*90 ಅಳತೆಯ ನಿವೇಶನವನ್ನು ಟ್ರಸ್ಟ್ ಹೆಸರಿಗೆ ಮಂಜೂರು ಮಾಡುವಂತೆ ಕೋರಿಕೊಂಡಿದ್ದು ಪರಿಶೀಲಿಸಲಾಗಿ ಸದರಿ ಸ್ವತ್ತು ತಾಲ್ಲೂಕು ಕಛೇರಿ ಜಾಗವಾಗಿರುವ ಬಗ್ಗೆ ಮತ್ತು ನಿವೇಶನ ಮಂಜೂರಾತಿಗೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ರವರ ಅಧಿಸೂಚನೆ ಯುಡಿಡಿ 27 ಟಿಟಿಪಿ 2016 ದಿನಾಂಕ: 24.05.2017ರ ಅಂಶಗಳನ್ನು ವಿವರಿಸಿ ಅದರಂತೆ ಕ್ರಮಕೈಗೊಳ್ಳಬೇಕಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು |
| ತೀರ್ಮಾನ:(18) | ಸದರಿ ವಿಷಯದ ಬಗ್ಗೆ ಚರ್ಚಿಸಲಾಗಿ ಕಾಂಗ್ರೆಸ್ ಭವನ್ ಟ್ರಸ್ಟ್ ವತಿಯಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಹಲವು ಗುರಿ ಮತ್ತು ಉದ್ದೇಶಗಳನ್ನು ಹೊಂದಿದ್ದು ಸದರಿ ನಿವೇಶನ ಮಂಜೂರು ಮಾಡುವುದರಿಂದ ಸಾರ್ವಜನಿಕ ಅನುಕೂಲಕ್ಕಾಗಿ ಕೈಗೊಳ್ಳಲಾಗುವ ಸಮ್ಮೇಳನ, ಬಡ ಕಲ್ಯಾಣ ಕಾರ್ಯಕ್ರಮಗಳಿಗೆ, ಕಾರ್ಯಾಗಾರಗಳು, ಉಪನ್ಯಾಸಗಳು, ಚರ್ಚೆಗಳು, ಅಭಿಯಾನ, ತರಬೇತಿಗಳಿಗೆ ಸಹಕಾರ ಆಗುವುದರೊಂದಿಗೆ ಹೊಳಲ್ಕೆರೆ ಪಟ್ಟಣದ ಸಾರ್ವಜನಿಕರಿಗೆ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ, ಕಂಪ್ಯೂಟರ್ ತರಬೇತಿ, ಟೈಲರಿಂಗ್ ಕೇಂದ್ರ ಮತ್ತು ಮೊಬೈಲ್ ರಿಪೇರಿ ತರಬೇತಿಗಳನ್ನು ನೀಡಲಾಗುವುದು ಎಂದು ಟ್ರಸ್ಟ್ ವತಿಯಿಂದ ಕೋರಿಕೊಂಡಿದ್ದು ಪ್ರಯುಕ್ತ ಸದರಿ ನಿವೇಶನ ನೀಡುವುದರಿಂದ ಪಟ್ಟಣದ ಸಾರ್ವಜನಿಕರಿಗೆ ಅನುಕೂಲವಾಗುವುದರಿಂದ ಸದರಿ ನಿವೇಶನವನ್ನು ಪರಿಶೀಲಿಸಿ ನಿಯಮಾನುಸಾರ ಟ್ರಸ್ಟ್‌ಗೆ ಮಂಜೂರು ಮಾಡಲು ಮತ್ತು ಇನ್ನುಳಿದ ಪಕ್ಷದ ಟ್ರಸ್ಟ್‌ರವರು ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದಲ್ಲಿ ನಿಯಮಾನುಸಾರ ಮಂಜೂರು ಮಾಡಲು ಒಪ್ಪಿ ಸಭೆಯಲ್ಲಿ ಸರ್ವಾನು ಮತದಿಂದ ಒಪ್ಪಿ ತೀರ್ಮಾನಿಸಲಾಯಿತು. |

ಸಹಿ/-
(ವಿಜಯಸಿಂಹ ಖಾಟ್ರೋತ್.ಎಲ್)
ಅಧ್ಯಕ್ಷರು,
ಪುರಸಭೆ, ಹೊಳಲ್ಕೆರೆ

ದೃಢೀಕೃತ ನಕಲು
ಮುಖ್ಯಾಧಿಕಾರಿ
ಪುರಸಭೆ, ಹೊಳಲ್ಕೆರೆ



File No. DMA/DEV/OTH/145/2025-DMA_DEV-DIRECTORATE OF MUNICIPAL ADMINISTRATION (Computer No. 1918965)

# ಪುರಸಭಾ ಕಾರ್ಯಾಲಯ ದೇವನಹಳ್ಳಿ

ಸಂಖ್ಯೆ:ದೇಪು/ಸಾ.ಸಭೆ/04/2025-26 ದಿನಾಂಕ: 10-09-2025

## "ಸಾಮಾನ್ಯ ಸಭೆ"

ದಿನಾಂಕ: 10-09-2025 ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಪುರಸಭಾ ಸಭಾಂಗಣದಲ್ಲಿ ಪುರಸಭೆಯ ಮಾನ್ಯ ಅಧ್ಯಕ್ಷರಾದ ಶ್ರೀ ಡಿ.ಎಂ ಮುನಿಕೃಷ್ಣ ಇವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು.

| ಕ್ರ ಸಂ | ವಿಷಯ-24/8 | ತೀರ್ಮಾನ-24/8 |
|---|---|---|
| 01 | ದೇವನಹಳ್ಳಿ ಪುರಸಭಾ ವ್ಯಾಪ್ತಿಯ ವಾರ್ಡ್ ನಂ.10 ರ ಅಜ್ಮಲ್ ಬಡಾವಣೆಯಲ್ಲಿನ ಸಿ.ಎ ನಿವೇಶನದ ಖಾತೆ ನಂ.3224/49/2/51/52/2 ರ ಅಳತೆ 6841.97 ಚ.ಮೀ ಸ್ವತ್ತನ್ನು ಲಾಭದಾಯಕವಲ್ಲದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ, ಕಂಪ್ಯೂಟರ್ ಟ್ರೈನಿಂಗ್, ಟೈಲರಿಂಗ್ ಸೆಂಟರ್ ಹಾಗೂ ಮೊಬೈಲ್ ರಿಪೇರಿ ತರಬೇತಿ ನಡೆಸಲು ಕಾಂಗ್ರೆಸ್ ಭವನ ಟ್ರಸ್ಟ್(ರಿ)ಗೆ ಮಂಜೂರು ಮಾಡುವ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಚರ್ಚಿಸಿರುವ ವಿಚಾರ. | ವಿಷಯವನ್ನು ಚರ್ಚಿಸಲಾಗಿ ದೇವನಹಳ್ಳಿ ಪುರಸಭಾ ವ್ಯಾಪ್ತಿಯ ವಾರ್ಡ್ ನಂ.10 ರ ಅಜ್ಮಲ್ ಬಡಾವಣೆಯಲ್ಲಿನ ಸಿ.ಎ ನಿವೇಶನದ ಖಾತೆ ನಂ.3224/49/2/51/52/2 ರ ಅಳತೆ 6841.97 ಚ.ಮೀ ಸ್ವತ್ತನ್ನು ದೇವನಹಳ್ಳಿ ಪುರಸಭಾ ವ್ಯಾಪ್ತಿಯ ವಾರ್ಡ್ ನಂ.10 ರ ಅಜ್ಮಲ್ ಬಡಾವಣೆಯಲ್ಲಿರುವ ಸಿ.ಎ ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್(ರಿ)ಗೆ ಮಂಜೂರು ಮಾಡುವ ಬಗ್ಗೆ ದಿನಾಂಕ: 09-07-2025 ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ:42 ರ ತೀರ್ಮಾನದಂತೆ ಗೈಡೆನ್ಸ್ ಆಫ್ ಆಫೀಸರ್ಸ್ (ಗ್ರ್ಯಾಂಟ್ ಆಫ್ ಕಾಫೀಸ್ ಅಂಡ್ ಮಿಸಲೇನಿಯಸ್) ಕಾಯ್ದೆ 1966 ರೂಲ್ 39ರ ಅನ್ವಯ ಆಕ್ಷೇಪಣೆ ಆಹ್ವಾನಿಸಿ 30 ದಿನಗಳ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಯಾವುದೇ ಲಿಖಿತ ಆಕ್ಷೇಪಣೆಗಳು ಈ ಕಛೇರಿಗೆ ಸ್ವೀಕೃತವಾಗದೇ ಇರುವ ಕಾರಣ ಕಾಂಗ್ರೆಸ್ ಭವನ ಟ್ರಸ್ಟ್(ರಿ) ದೇವನಹಳ್ಳಿ ರವರಿಗೆ ಸದರಿ ಸಿ.ಎ ನಿವೇಶನವನ್ನು 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆಗೆ ಸಲ್ಲಿಸಲು ಒಪ್ಪಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. |

ಸಹಿ/-
ಅಧ್ಯಕ್ಷರು
ಪುರಸಭೆ, ದೇವನಹಳ್ಳಿ

ನಕಲು

ಮುಖ್ಯಾಧಿಕಾರಿ
ಪುರಸಭೆ ದೇವನಹಳ್ಳಿ



File No. DMA/DEV/OTH/152/2025-DMA_DEV-DIRECTORATE OF MUNICIPAL ADMINISTRATION (Computer No. 1952933)

# ಪಟ್ಟಣ ಪಂಚಾಯತ ಕಾರ್ಯಾಲಯ ಕಲಬುರಗಿ

E-mail: co.kalagitp@gmail.com Website: www.kalagitown.mrc.gov.in Phone no 08474-200310


ಸಂ.ಪಪಂಕಾ/ನಾ.ಸೌ.ನಿವೇಶನ /2025-26 ದಿನಾಂಕ : 03.07.2025

ದಿನಾಂಕ: 03.07.2025. ರಂದು ಬೆಳಗ್ಗೆ 11.00 ಗಂಟೆಗೆ ಮಾನ್ಯ ಆಡಳಿತಾಧಿಕಾರಿಗಳು ಪಟ್ಟಣ ಪಂಚಾಯತ ಕಾಳಗಿ ಹಾಗೂ ತಹಶೀಲ್ದಾರರು ಕಾಳಗಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳು.

| ಕ್ರ ಸಂ | ವಿಷಯ | ಠರಾವು | ನಿರ್ಣಯಗಳು |
|---|---|---|---|
| 01 | ಕಾಳಗಿಯಲ್ಲಿ ಕಾಂಗ್ರೆಸ ಭವನ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಸಿ.ಎ ನಿವೇಶನ ಒದಗಿಸುವ ಕುರಿತು. | 07 | ಕಾಳಗಿ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕಾಂಗ್ರಸ ಭವನ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಸಿ.ಎ ನಿವೇಶನ ಒದಗಿಸಲು ವಿಜಯ ಮುಲಗುಂಡ ಅಧ್ಯಕ್ಷರು ಕಾಂಗ್ರಸ ಭವನ ಸಂಸ್ಥೆ ಬೆಂಗಳೂರು ರವರ ಮನವಿ ಪತ್ರವನ್ನು ದಿನಾಂಕ: 03.07.2025 ರಂದು ಮುಖ್ಯಾಧಿಕಾರಿಗಳು ಸಭೆಯಲ್ಲಿ ಮಂಡಿಸಿದರು. ವಿಷಯವನ್ನು ಚರ್ಚಿಸಲಾಗಿ ಕಾಳಗಿ ಇವರ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ ಲಭ್ಯವಿರುವ ಶ್ರೀ ಪರಮೇಶ್ವರು ತಂದೆ ಗುರುಲಿಂಗಪ್ಪ ಸಾ: ಕಾಳಗಿ ಇವರ ವಿನ್ಯಾಸದಲ್ಲಿನ ವಿವರ ಈ ಕೆಳಕಂಡ ಕೋಷ್ಟಕದಲ್ಲಿರುವಂತೆ ನಮೂದಿಸಲಾಗಿದೆ. |

| SL. NO | Name of the loyout locality | Sy,no | Extent of Layout site in sq.m./acre guntas(100%) | Date of layout approval | Civic Amenity Site NO | Extent of CA Site in sq.m. | Date of resolation of the Authority | Civic Amenity site Valuation Sq.m (As per subregister Report) |
|---|---|---|---|---|---|---|---|---|
| 01 | Parameshwar so gurulingappa | 230/3 | 03 acre | 28.02.2020 | 42-205 | 614.92 ಚ.ಮೀ | 03.07.2025 | 2500=00 |

| ಕ್ರಸ | ಸರ್ವೆ ನಂಬರ | ಸಿ.ಎ ನಿವೇಶದ ಮೌಲ್ಯ (Per Sq.m) | ಸಿ.ಎ ನಿವೇಶದ ಒಟ್ಟು ಮೌಲ್ಯ |
|---|---|---|---|
| 1 | 230/3 | 2500/- | 1537300=00 |

ಮೇಲ್ಕಂಡ ಸಿ.ಎ ನಿವೇಶನದಲ್ಲಿ ಕಾಳಗಿ ಕಾಂಗ್ರಸ ಭವನ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಲೀಜ್ ಮೇಲೆ ಸ್ಥಳವನ್ನು ನೋಂದಣಿ ಮಾರುಕಟ್ಟೆ ಮೌಲ್ಯ ನೀಡಲು ಮಾನ್ಯ ನೊಂದಣಾಧಿಕಾರಿಗಳಲ್ಲಿ ಪತ್ರ ಬರೆಯಲಾಗಿದ್ದು, ಪ್ರಸ್ತುತ ಸದರಿ ಸರ್ವೆ ನಂಬರ 230/3 ರ ಮಾರುಕಟ್ಟೆ ಮೌಲ್ಯದರ ಲಭ್ಯವಿರುವುದಿಲ್ಲ ಅಕ್ಕ ಪಕ್ಕದ ಸರ್ವೆನಂಬರಗಳಾದ 230/1 ಮಾರುಕಟ್ಟೆ ಮೌಲ್ಯ ದರವನ್ನು ಪರಿಗಣಿಸಬೇಕೆಂದು ಮೌಖಿಕವಾಗಿ ತಿಳಿಸಿರುತ್ತಾರೆ. ಪ್ರಯುಕ್ತ ಸದರಿಯವರ ನಿರ್ದೇಶನದಂತೆ ಕಾಳಗಿ ಕಾಂಗ್ರಸ ಭವನ ಸಂಸ್ಥೆ ಕಟ್ಟಡ ನಿರ್ಮಾಣಕ್ಕಾಗಿ ಲೀಜ್ ಆಧಾರದ ಮೇಲೆ ಸ್ಥಳವನ್ನು ಒದಗಿಸಲು ಪ್ರಸ್ತಾವನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಕಲಬುರಗಿರವರಲ್ಲಿ ಸಲ್ಲಿಸಿ ಮಂಜೂರಾತಿ ಪಡೆಯಲು ಮುಖ್ಯಾಧಿಕಾರಿಗಳಿಗೆ ಸೂಚಿಸಿ ಸರ್ವಾನುಮತದಿಂದ ಠರಾವು ಪಾಸ ಮಾಡಲಾಯಿತು.

ಮುಖ್ಯಾಧಿಕಾರಿಗಳು
ಪಟ್ಟಣ ಪಂಚಾಯತ ಕಾಳಗಿ

ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಕಾಳಗಿ

"ದೃಢೀಕರಿಸಲಾಗಿದೆ"
ಮುಖ್ಯಾಧಿಕಾರಿಗಳು
ಪಟ್ಟಣ ಪಂಚಾಯತ ಕಾಳಗಿ

"ದೃಢೀಕರಿಸಲಾಗಿದೆ"
CHIEF OFFICER
TOWN PANCHAYAT KALAGI
Dist.Kalaburagi

Scanned with OKEN Scanner



File No. DMA/DEV/OTH/251/2024-DMA_DEV-DIRECTORATE OF MUNICIPAL ADMINISTRATION (Computer No. 1564396)
Generated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 12:

Scanned with OKEN Scanner

# ಪುರಸಭೆ ಕಾರ್ಯಾಲಯ ಚಿಂಚೋಳಿ,ಜಿ-ಗುಲಬರ್ಗಾ

ಈ-ಮೇಲ್: itstaff ulb chincholi@yahoo.in
ದೂರವಾಣಿ: 08475-273058

ಮಾನ್ಯ ಶ್ರೀ ಆನಂದಕುಮಾರ ನಾಗೇಂದ್ರಪ್ಪ ಟೈಗರ್ ಪುರಸಭೆ ಚಿಂಚೋಳಿ ಅಧ್ಯಕ್ಷರು ಅಧ್ಯಕ್ಷತೆಯಲ್ಲಿ ದಿನಾಂಕ: 18.12.2024 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಗಳು.

ಇಂದು ದಿನಾಂಕ : 18.12.2024 ರಂದು ಸಾಮಾನ್ಯ ಸಭೆಗೆ ಆಗಮಿಸಿದ ಮಾನ್ಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರು ಸರ್ವ ಸದಸ್ಯರು ವಿವಿಧ ಇಲಾಖೆಯಿಂದ ಬಂದ ಅಧಿಕಾರಿಗಳು ಹಾಗೂ ಪತ್ರಕರ್ತರಿಗೆ ಮುಖ್ಯಾಧಿಕಾರಿಗಳು ಸಭೆಗೆ ಸ್ವಾಗತಿಸಿದರು. ತದನಂತರ ಶ್ರೀ ಆನಂದಕುಮಾರ ನಾಗೇಂದ್ರಪ್ಪ ಟೈಗರ್ ಅಧ್ಯಕ್ಷರು ಅವರು ಕೂಡಾ ಸಭೆಗೆ ಆಗಮಿಸಿದ ಸರ್ವರಿಗೂ ಸ್ವಾಗತಿಸಿದರು.

<u>ವಿಷಯ ಸಂಖ್ಯೆ</u> (01) : ಹಿಂದಿನ ಸಾಮಾನ್ಯ ಸಭೆಯ ನಡುವಳಿ ಅನುಮೋದನೆ ನೀಡುವ ಕುರಿತು

<u>ಪ್ರಸ್ತಾವನೆ ಸಂಖ್ಯೆ (01)</u> : ಶ್ರೀ ವೆಂಕಟೇಶ ಧ್ವಿ.ದ.ಸ ದಿನಾಂಕ : 08.10.2024 ರಂದು ನಡೆದ ಸಾಮಾನ್ಯ ಸಭೆಯ ನಡುವಳಿಯನ್ನು ಓದಲಾಯಿತ್ತು, ಓದಿ ಸಭೆಯಲ್ಲಿ ಅಂಗೀಕರಿಸಲು ಓದಲಾಯಿತ್ತು.

<u>ಠರಾವು ಸಂಖ್ಯೆ</u> (01) : ಸದರಿ ವಿಷಯದ ಕುರಿತು ದೀರ್ಘಕಾಲ ಚರ್ಚಿಸಿ ದಿನಾಂಕ : 08.10.2024 ನಡೆದ ಸಾಮಾನ್ಯ ಸಭೆಯ ನಡುವಳಿಯನ್ನು ಸಭೆಯಲ್ಲಿ ಸರ್ವಾನು ಮತದಿಂದ ಒಪ್ಪಿ ಠರಾವು ಪಾಸ ಮಾಡಲಾಯಿತ್ತು.

<u>ವಿಷಯ ಸಂಖ್ಯೆ</u> (02) : ಚಿಂಚೋಳಿ ಪುರಸಭೆ ವ್ಯಾಪ್ತಿಯಲ್ಲಿ ಪ್ರಮುಖ ಸ್ಥಳಗಳಲ್ಲಿ ಸಿ.ಸಿ ಕ್ಯಾಮರ ಅಳವಡಿಸುವುದು ಪುರಸಭೆ ಕಛೇರಿಯಲ್ಲಿ ಸಿ.ಸಿ ಕ್ಯಾಮರಾ ಅಳವಡಿಸುವ ಕುರಿತು ಚರ್ಚೆ.

<u>ಪ್ರಸ್ತಾವನೆ ಸಂಖ್ಯೆ (02)</u> : ಮುಖ್ಯಾಧಿಕಾರಿಗಳು ಸಭೆಯಲ್ಲಿ ಮಾತನಾಡಿ ಚಿಂಚೋಳಿ ಪುರಸಭೆ ವ್ಯಾಪ್ತಿಯಲ್ಲಿ ಬರುವ ಪ್ರಮುಖ ಸ್ಥಳಗಳಲ್ಲಿ ಸಿ.ಸಿ ಕ್ಯಾಮರಗಳನ್ನು ಅಳವಡಿಸಲು ಪೋಲಿಸ್ ಇಲಾಖೆಯೊಂದಿಗೆ ಚರ್ಚಿಸಿ ಮುಂಬರುವ ಕ್ರೀಯಾ ಯೋಜನೆಯಲ್ಲಿ ಅನುದಾನ ಕಾಯ್ದಿರಿಸಿ ಅಳವಡಿಸಬಹುದಾಗಿದೆ ಎಂದು ಸಭೆಯಲ್ಲಿ ವಿವರಿಸಿದರು. ಮತ್ತು ಪುರಸಭೆ ಕಾರ್ಯಾಲಯ ಮುಂಬರುವ ವರ್ಷದ ಕ್ರೀಯಾ ಯೋಜನೆಯಲ್ಲಿ ಅನುದಾನ ಕಾಯ್ದಿರಿಸಬಹುದಾಗಿದೆ ಎಂದು ಸಭೆಯಲ್ಲಿ ಮಂಡಿಸಿದರು.

<u>ಠರಾವು ಸಂಖ್ಯೆ</u> (02) : ಸದರಿ ವಿಷಯದ ಕುರಿತು ದೀರ್ಘಕಾಲ ಚರ್ಚಿಸಿ ಪೋಲಿಸ್ ಇಲಾಖೆಯೊಂದಿಗೆ ಚರ್ಚಿಸಿ ಮುಂಬರುವ ವಾರ್ಷಿಕ ವರ್ಷದಲ್ಲಿ ಅನುದಾನ ಕಾಯ್ದಿರಿಸಲು ಸಭೆಯಲ್ಲಿ ನಿರ್ಣಯಿಸಲಾಯಿತ್ತು. ಹಾಗೂ ಪುರಸಭೆ ಚಿಂಚೋಳಿ ಪ್ರಮುಖ ಸ್ಥಳಗಳಲ್ಲಿ ಸಿ.ಸಿ ಕ್ಯಾಮರ ಅಳವಡಿಸಲು ಮುಂಬರುವ ವರ್ಷದ ಅನುದಾನವನ್ನು ಕಾಯ್ದಿರಿಸಿ ಸಿ.ಸಿ ಕ್ಯಾಮರ ಅಳವಡಿಸಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಠರಾವು ಪಾಸ ಮಾಡಲಾಯಿತ್ತು. ಕಾರ್ಯಾಲಯದಲ್ಲಿ ಸಿ.ಸಿ ಕ್ಯಾಮರಗಳನ್ನು

<u>ವಿಷಯ ಸಂಖ್ಯೆ</u> (03) : ಪುರಸಭೆ ವ್ಯಾಪ್ತಿಯಲ್ಲಿ ಬರುವ ಕರ ವಸೂಲಿ, ಕರ ಕ್ರೋಢೀಕರಣ, ಬಾಕಿ ಉಳಿದಿರುವ ಕರಗಳ ಕುರಿತು, ಕರ ಪಾವತಿಸದೇ ಅನಧಿಕೃತವಾಗಿ ನಿರ್ಮಾಣಗೊಂಡಿರುವ ಚಾಲ್ತಿಯಲ್ಲಿರುವ ಕಟ್ಟಡಗಳ ವಿರುದ್ಧ ಕೈಗೊಂಡಿರುವ ಕ್ರಮಗಳ ಕುರಿತು ಚರ್ಚೆ.

<u>ಪ್ರಸ್ತಾವನೆ ಸಂಖ್ಯೆ (03)</u> : ಶ್ರೀಮತಿ ಪದ್ಮಾವತಿ ಪ್ರಭಾರಿ ಕಂದಾಯಾಧಿಕಾರಿ ರವರು ಸಭೆಯಲ್ಲಿ ಪ್ರಸ್ತುತ್ತವರೆಗೆ ಕರ ವಸೂಲಾತಿ ಮಾಡಿದ ಕುರಿತು ಸಭೆಯಲ್ಲಿ ವಿವರಣೆ ನೀಡಿದರು ತದನಂತರ I. ಪುರಸಭೆ ಅಧ್ಯಕ್ಷರು ಮಾತನಾಡಿ ಪ್ರಸ್ತುತ ಪುರಸಭೆ ವ್ಯಾಪ್ತಿಯಲ್ಲಿ ಎಷ್ಟು? ಎನ್.ಎ ಲೇಓಟ್ ಅನುಮೋದನೆ

ಪು.ತಿ.ನೋ –

Scanned with OKEN Scanne



File No. DMA/DEV/OTH/157/2025-DMA_DEV-DIRECTORATE OF MUNICIPAL ADMINISTRATION (Computer No. 1965852)

ಪುರಸಭೆಯಿಂದ ನೀಡಲಾಗಿದೆ. ಎನ್.ಎ ಲೇಔಟ್ ಮಾಲೀಕರು ಸದರಿ ಜಮೀನಿನಲ್ಲಿ ಎಷ್ಟು ಅಭಿವೃದ್ಧಿ ಮಾಡಿದ್ದಾರೆ ಎಂಬುವುದರ ಕುರಿತು ಕಿರಿಯ ಅಭಿಯಂತರರು. ಕಂದಯಾ ನೀರಿಕ್ಷಕರು. ಸ್ಥಳ ಪರಿಶೀಲಿಸಿ ಅಭಿವೃದ್ಧಿ ಪಡಿಸಿದರ ಯಾದಿಯನ್ನು ತಯ್ಯಾರಿಸಲು ಸಭೆಯಲ್ಲಿ ತಿಳಿಸಿದರು.

2. ಸಿದ್ಧಸಿರಿ ಕಾರ್ಖಾನೆಗೆ ಪುರಸಭೆಯಿಂದ ನೀಡಿರುವ ಎನ್.ಓ.ಸಿ ಯನ್ನು ರದ್ದು ಪಡಿಸಲು ಮಾನ್ಯ ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಸಭೆಯಲ್ಲಿ ತಿಳಿಸಿದರು. ಅದಕ್ಕೆ ಮುಖ್ಯಾಧಿಕಾರಿಗಳು ಮಾತನಾಡಿ ಸಿದ್ಧಸಿರಿ ಕಾರ್ಖಾನೆಗೆ ನೀಡಿರುವ ಎನ್.ಓ.ಸಿ ಯು ಪುರಸಭೆ ಆರ್ಥಿಕ ಹೆಚ್ಚಿಸಲು ಮತ್ತು ರೈತರ ಹಿತದೃಷ್ಟಿಯಿಂದಾಗಿ ಎನ್.ಓ.ಸಿ ಯನ್ನು ನೀಡಲಾಗಿದೆ. ಆದ್ದುದರಿಂದ ಅದನ್ನು ರದ್ದು ಪಡಿಸಲು ನಮಗೆ ಅಧಿಕಾರ ಇಲ್ಲ ಎಂದು ಮುಖ್ಯಾಧಿಕಾರಿಗಳು ಸಭೆಯಲ್ಲಿ ಅವರ ಅಭಿಪ್ರಾಯ ತಿಳಿಸಿದರು. ತದನಂತರ ಪುರಸಭೆ ಅಧ್ಯಕ್ಷರು ಮಾತನಾಡಿ ನೀಡಿರುವ ಎನ್.ಓ.ಸಿ ಯನ್ನು ರದ್ದು ಪಡಿಸಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ವಿವರಿಸಿದರು.

<u>ಠರಾವು ಸಂಖ್ಯೆ</u> (03) : ಸದರಿ ವಿಷಯದ ಕುರಿತು ದೀರ್ಘಕಾಲ ಚರ್ಚಿಸಿ

1. ಪುರಸಭೆ ವ್ಯಾಪ್ತಿಯಲ್ಲಿ ಬರುವ ಎನ್.ಎ ಲೇಔಟ್‌ಗಳ ಯಾದಿಯನ್ನು ತಯ್ಯಾರಿಸಿ ಲೇಔಟ್ ಮಾಲೀಕರು ಸದರಿ ಬಡಾವಣೆಗಳಲ್ಲಿ ಎಷ್ಟು? ಅಭಿವೃದ್ಧಿ ಕೆಲಸ ಮಾಡಿದ್ದಾರೆ ಎಂಬುವುದನ್ನು ಕಿರಿಯ ಅಭಿಯಂತರರು. ಕಂದಯಾ ನೀರಿಕ್ಷಕರು. ಸ್ಥಳ ಪರಿಶೀಲಿಸಿ ಅಭಿವೃದ್ಧಿ ಪಡಿಸಿದರ ಯಾದಿಯನ್ನು ತಯ್ಯಾರಿಸಲು ಸಭೆಯಲ್ಲಿ ನಿರ್ಣಯಿಸಿದರು.

2.ಪುರಸಭೆಯಿಂದ ಸಿದ್ಧಸಿರಿ ಕಾರ್ಖಾನೆಗೆ ನೀಡಿದ ಎನ್.ಓ.ಸಿ ಯನ್ನು ರದ್ದು ಪಡಿಸಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಸರ್ವಾನು ಮತದಿಂದ ಒಪ್ಪಿ ಠರಾವು ಪಾಸ ಮಾಡಲಾಯಿತು.

<u>ವಿಷಯ ಸಂಖ್ಯೆ</u> (04) : ಇಂದಿರಾ ಕ್ಯಾಂಟಿನ್ ಕುರಿತು ಚರ್ಚೆ.

<u>ಪ್ರಸ್ತಾವನೆ ಸಂಖ್ಯೆ (04)</u> : ದಿನಾಂಕ : 11.11.2024 ರಂದು ಮಾನ್ಯ ಅಧ್ಯಕ್ಷರು ಪುರಸಭೆ ಚಿಂಚೋಳಿ ಮತ್ತು ಮುಖ್ಯಾಧಿಕಾರಿ ಪುರಸಭೆ ಚಿಂಚೋಳಿ ರವರು ಇಂದಿರಾ ಕ್ಯಾಂಟಿನ್‌ಗೆ ಭೇಟಿ ನೀಡಿದಾಗ ಈ ಕೆಳಗಿನಂತೆ ಪಟ್ಟಿಯಲ್ಲಿ ತಿಳಿಸಿರುವಂತೆ ಲೋಪದೋಷಗಳು ಕಂಡು ಬಂದಿರುತ್ತವೆ ಎಂದು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

- ಆಹಾರವನ್ನು ಸ್ವೀಕರಿಸುತ್ತಿರುವ ಸಾರ್ವಜನಿಕರ ವಿವರಗಳನ್ನು ದಾಖಲಿಸುವಂತೆ ಸೂಚಿಸಿದರು ಕೂಡ ಸರಿಯಾಗಿ ದಾಖಲಾತಿಗಳನ್ನು ನಿರ್ವಹಣೆ ಮಾಡಿರುವುದಿಲ್ಲ.
- ಇಂದಿರಾ ಕ್ಯಾಂಟಿನ್ ನಲ್ಲಿ ನೀರು ಶುದ್ಧಿಕರಣ ಯಂತ್ರ ಹಾಳಾಗಿದ್ದು ಇಲ್ಲಿಯವರೆಗೆ ರಿಪೇರಿ ಮಾಡುವುದಾಗಲಿ / ಪುರಸಭೆ ಗಮನಕ್ಕೆ ತರುವುದಾಗಲಿ ಮಾಡಿರುವುದಿಲ್ಲ.
- ಸಿಬ್ಬಂದಿಗಳಿಗೆ ಸುರಕ್ಷಾ ಕವಚಗಳು ನೀಡಿರುವುದಿಲ್ಲ.
- ಅಡುಗೆ ಸಿದ್ಧಪಡಿಸಲು ಉಪಯೋಗಿಸುವ ಎಲ್ಲಾ ಡಬ್ಬಗಳು ತೆರೆದ ಸ್ಥಿತಿಯಲ್ಲಿ ಇರುವುದು ಕಂಡು ಬಂದಿರುತ್ತದೆ.
- ಕ್ಯಾಂಟಿನ ನಲ್ಲಿ ಸಿದ್ಧಪಡಿಸುವ ಅಡುಗೆ ನಿಗದಿತ ಗುಣಮಟ್ಟದಲ್ಲಿ ಇರದೆ ಇರುವುದು ಕಂಡುಬಂದಿರುತ್ತದೆ.ಹಾಗೂ ರಾತ್ರಿಯಲ್ಲಿ ಅಷ್ಟು ಗುಣ್ಣಮಟ್ಟದ ಅಡುಗೆ ಮಾಡುತ್ತಿಲ್ಲವೆಂದು ಸಾರ್ವಜನಿಕರ ದೂರುಗಳು ಬರುತ್ತಿವೆ.
- ಅಡುಗೆಗೆ ಬಳಸಲಾಗುವ ಪಾತ್ರೆಗಳು ಮತ್ತು ಯಂತ್ರಗಳು ಸರಿಯಾಗಿ ತೊಳೆದಿರುವುದಿಲ್ಲ.
- ಕ್ಯಾಂಟಿನ್ ನಲ್ಲಿರುವ ಶೌಚಾಲಯ ಶುಚಿಗೊಳಿಸಿರುವುದಿಲ್ಲ.
- ಸಿಬ್ಬಂದಿ ಗಳ್ಯ ಶಿಂಗಳಿಂದ ಇಂದಿರಾ ಕ್ಯಾಂಟಿನ್ ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಿಲ್ಲ.
- ಇಂದಿರಾ ಕ್ಯಾಂಟಿನ್ ಅಡುಗೆ ಮೆನ್ಯೂ ಪ್ರಕಾರ ಊಟದ ಸರಬರಾಜು ಮಾಡುತ್ತಿಲ್ಲ.

Scanned with OKEN Scanner

<u>ಠರಾವು ಸಂಖ್ಯೆ</u> (04) : ಸದರಿ ವಿಷಯದ ದೀರ್ಘಕಾಲ ಚರ್ಚಿಸಿ, ಇಂದಿರಾ ಕ್ಯಾಂಟಿನ್‌ಗೆ ಊಟ ಸರಬರಾಜು ಮಾಡುತ್ತಿರುವ ಗುತ್ತಿಗೆದಾರರಿಗೆ ನೋಟಿಸ್ ಜಾರಿ ಮಾಡಿ ಮಾನ್ಯ ಯೋಜನಾ ನಿರ್ದೇಶಕರು [illegible] ರವರ ಕಛೇರಿಗೆ ಪತ್ರ ಬರೆದು ಇಂದಿರಾ ಕ್ಯಾಂಟಿನ್ ಊಟ ಸರಬರಾಜು ಮಾಡುತ್ತಿರುವ ಕಾಮಗಾರಿಯ ಅಂದಾಜು ಪತ್ರಿಕೆ, ಕಾಮಗಾರಿ ಆದೇಶ ಪತ್ರ ಇತರೆ ದಾಖಲಾತಿಗಳನ್ನು ಪಡೆಯಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಹಾಗೂ ಸದರಿ ಗುತ್ತಿಗೆದಾರರಿಗೆ ಸರಿಯಾದ ರೀತಿಯಲ್ಲಿ ಊಟ ಸರಬರಾಜು ಮಾಡದೇ ಇರುವುದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳಲು ಪತ್ರ ಬರೆಯಲು ಜಿಲ್ಲಾಧಿಕಾರಿಗಳಿಗೆ ಸಭೆಯಲ್ಲಿ ಒಪ್ಪಿ ಠರಾವು ಪಾಸ ಮಾಡಲಾಯಿತು.

<u>ವಿಷಯ ಸಂಖ್ಯೆ</u> (05) : ಪುರಸಭೆ ವ್ಯಾಪ್ತಿಯಲ್ಲಿ ಭೂ ಸೇನಾ ಇಲಾಖೆ ವತಿಯಿಂದ ಕೈಗೊಂಡ ಕಾಮಗಾರಿಗಳ ಕುರಿತು ಚರ್ಚೆ.

<u>ಪ್ರಸ್ತಾವನೆ ಸಂಖ್ಯೆ (05)</u> : ಸಭೆಗೆ ಆಗಮಿಸಿದ ಭೂ ಸೇನಾ ಇಲಾಖೆ ವತಿಯಿಂದ ಸಾಮಾನ್ಯ ಸಭೆಗೆ ಆಗಮಿಸಿದ ಅಧಿಕಾರಿಯವರು ಅವರ ಇಲಾಖೆ ವತಿಯಿಂದ ನಡೆಯುತ್ತಿರುವ ಕಾಮಗಾರಿಗಳ ಕುರಿತು ಸಭೆಯಲ್ಲಿ ವಿವರಿಸಿದರು. ತದನಂತರ ಮಾನ್ಯ ಅಧ್ಯಕ್ಷರು ಪುರಸಭೆ ಚಿಂಚೋಳಿ ರವರು ಮಾತನಾಡಿ 2015-16 ನೇ ಸಾಲಿನಿಂದ ನಡೆಯುತ್ತಿರುವ ನಮ್ಮ ಊರು ಯೋಜನೆಯಡಿಯಲ್ಲಿ ನಡೆಯುತ್ತಿರುವ ಶಾಪಿಂಗ್ ಕಾಂಪ್ಲೇಕ್ಸ್, ರಂಗ ಮಂದಿರ, ಗಾಂಧೀ ಚೌಕ ದಿಂದ ತಾಂಡೂರ ಕ್ರಾಸ ವರೆಗೆ ಡ್ರೇನ್ ಕಾಮಗಾರಿ ಮತ್ತು ಒಳಾಂಗಣ ಕ್ರೀಡಾಂಗಣ ಕಾಮಗಾರಿಯು ಪೂರ್ಣಗೊಳದೇ ಹಾಗೇ ಉಳದಿರುತ್ತದೆ. ಕಾಮಗಾರಿ ಯಾವಾಗ ಪೂರ್ಣಗೊಳಿಸುವುದು ಎಂದು ಪ್ರಶ್ನಿಸಿದರು? ಅದಕ್ಕೆ ಭೂ ಸೇನಾ ಇಲಾಖೆ ವತಿಯಿಂದ ಆಗಮಿಸಿದ ಅಧಿಕಾರಿಯವರು ಮಾತನಾಡಿ ಈಗಾಗಲೇ ಸದರಿ ಎಲ್ಲಾ ಕಾಮಗಾರಿಗಳ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ ಎಂದು ವರದಿ ಸಲ್ಲಿಸಿರುತ್ತಾರೆ, ಆದರೆ ಪ್ರಸ್ತುತ ಸ್ಥಳಗಳಲ್ಲಿ ಯಾವುದೇ ಕಾಮಗಾರಿ ಪೂರ್ಣಗೊಂಡಿರುವುದಿಲ್ಲಾ ಹಾಗೂ ಸದರಿ ಕಾಮಗಾರಿಗಳನ್ನು ಪುನಃ ಪ್ರಾರಂಭಿಸಲು ಅನುದಾನ ಇರುವುದಿಲ್ಲ ಎಂದು ಸಭೆಯಲ್ಲಿ ವಿವರಿಸಿದರು. ಈಗಾಗಲೇ ಸದರಿ ಕಾಮಗಾರಿಯ ಕುರಿತು ಸ್ವಯಂ ಪ್ರೇರಿತವಾಗಿ ಲೋಕಯುಕ್ತ ಕಛೇರಿಯಲ್ಲಿ ದೂರು ದಾಖಲಿಸಲಾಗಿದೆ ಎಂದು ತಿಳಿಸಿದರು, ತದನಂತರ ಪುರಸಭೆ ಅಧ್ಯಕ್ಷರು ಮಾತನಾಡಿ ಸದರಿ ಕಾಮಗಾರಿಗಳು ಪೂರ್ಣಗೊಳದೇ ಇರುವುದರಿಂದ ಸದರಿಯವರ ವಿರುದ್ಧ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಮತ್ತು ಸಂಭಂದಪಟ್ಟ ಪ್ರಾಧಿಕಾರಕ್ಕೆ ಕ್ರಮ ಕೈಗೊಳ್ಳಲು ಪತ್ರ ಬರೆಯಲು ಸಭೆಯಲ್ಲಿ ತಿಳಿಸಿದರು.

<u>ಠರಾವು ಸಂಖ್ಯೆ</u> (05) : ಸದರಿ ವಿಷಯದ ದೀರ್ಘಕಾಲ ಚರ್ಚಿಸಿ, 2015-16 ನೇ ಸಾಲಿನ ಕೆ.ಕೆ.ಆರ್.ಡಿ.ಬಿ ಯೋಜನೆಯಡಿ ನಮ್ಮ ಊರು ಯೋಜನೆ I. ಶಾಪಿಂಗ್ ಕಾಂಪ್ಲೇಕ್ಸ್ , ರಂಗ ಮಂದಿರ ಒಳಾಂಗಣ ಕ್ರೀಡಾಂಗಣ ಮತ್ತು ಗಾಂಧೀ ಚೌಕ ದಿಂದ ತಾಂಡೂರ ಕ್ರಾಸ್ ವರೆಗೆ ಸಿ.ಸಿ ಡ್ರೇನ್ ಕಾಮಗಾರಿ ಪೂರ್ಣಗೊಳದೇ ಹಾಗೇ ಉಳದಿರುವುದರಿಂದ ಸದರಿ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದು ತಪಿಸ್ತರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಪತ್ರ ಬರೆಯಲು ಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿ ಠರಾವು ಪಾಸ ಮಾಡಲಾಯಿತು.

<u>ವಿಷಯ ಸಂಖ್ಯೆ</u> (06) : ಚಿಂಚೋಳಿ ಪುರಸಭೆ ವ್ಯಾಪ್ತಿಯಲ್ಲಿ ಕರ್ನಾಟಕ ಕೊಳಗೇರಿ ಕೊಳಚೆ ನಿರ್ಮೂಲನಾ ಅಭಿವೃದ್ಧಿ ಮಂಡಳಿ ವತಿಯಿಂದ ನಿರ್ಮಾಣಗೊಂಡಿರುವ ನಿರ್ಮಿಸುತ್ತಿರುವ ಮನೆಗಳು ಮತ್ತು ಸ್ಲಮ್ ಇಲಾಖೆಗೆ ಸಂಬಂಧಿಸಿದ ಇತರೆ ವಿಷಯಗಳ ಕುರಿತು ಚರ್ಚೆ.

<u>ಪ್ರಸ್ತಾವನೆ ಸಂಖ್ಯೆ (06)</u> : ಮಾನ್ಯ ಅಧ್ಯಕ್ಷರು ಮಾತನಾಡಿ ಈಗಾಗಲೇ ಸದರಿ ಇಲಾಖೆಗಳ ವಿರುದ್ಧ ಸುಮಾರು ಬಾರಿ ಪತ್ರ ಬರೆದು ಜಿ+1 ಮನೆಗಳ ಮತ್ತು ಪಟ್ಟಣದಲ್ಲಿ ನಡೆಯುತ್ತಿರುವ ಮನೆಗಳು ಯಾವ ಹಂತದಲ್ಲಿದೆ ಎಷ್ಟು? ಪೂರ್ಣಗೊಂಡಿವೆ ಎಂಬುವುದರ ಮಾಹಿತಿ ಮತ್ತು ಅಂದಾಜು ಪತ್ರಿಕೆ, ನೀಲಿ ನಕ್ಷೆ, ಮತ್ತು ಇತರೆ ದಾಖಲಾತಿಗಳನ್ನು ನೀಡಲು, ಪತ್ರ ಬರೆದರು ಯಾವುದೇ ದಾಖಲಾತಿಗಳು ನೀಡುತ್ತಿಲ್ಲ ಮತ್ತು ವಾಜಪೇಯಿ ಯೋಜನೆಯ ಮನೆಗಳ ಹಕ್ಕುಪತ್ರಗಳು ಫಲಾನುಭವಿಗಳಿಗೆ ನೀಡಿರುವುದಿಲ್ಲ. ಹಾಗೂ ಸರ್ವೆ ನಂ 311

ಮು.ತಿ.ನೋ ...

Scanned with OKEN Scanner

Scanned with OKEN Scanner

ರಲ್ಲಿ ನಿರ್ಮಿಸಿದ 200 ಮನೆಗಳಲ್ಲಿ ಜನಸ್ಪಂದನ ಕಾರ್ಯಕ್ರಮದಲ್ಲಿ ಸಾಂಕೇತವಾಗಿ ಮಾನ್ಯ ಜಿಲ್ಲಾ[illegible]
ಸಚಿವರಿಂದ 10 ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಿದೆ ಉಳಿದ ಫಲಾನುಭವಿಗಳಿಗೆ ಏನು ನೀಡಿರುವುದಿಲ್ಲ
ಪತ್ರಗಳನ್ನು ಕರ್ನಾಟಕ ಕೊಳಚೆ ಮಂಡಳಿ ಅಧಿಕಾರಿಗಳಿಗೆ ಮೌಖಿಕವಾಗಿ ಹಾಗೂ ಲಿಖಿತ ಪತ್ರ ಬರೆದರು
ಇಲ್ಲಿಯವರೆಗೆ ನೀಡಿರುವುದಿಲ್ಲ ಆದ್ದರಿಂದ ಸದರಿಯವರು ಸಾಮಾನ್ಯ ಸಭೆಗೆ ಅವರ ಇಲಾಖೆಯ ವಿಷಯ[illegible]
ಸಭೆಯಲ್ಲಿ ಚರ್ಚಿಸಲು ಸಭೆಗೆ ಆಗಮಿಸಲು ನೋಟಿಸ್ ನೀಡಿದರು ಸಹ ಸ್ಲಮ್ ಇಲಾಖೆ ಅಧಿಕಾರಿಗಳು [illegible]
ಸಹಕಾರ ನೀಡುತ್ತಿಲ್ಲ. ಇದ್ದರಿಂದ ಸಾರ್ವಜನಿಕರು ಪುರಸಭೆ ದಿನಲೂ ಭೇಟಿ ನೀಡಿ ಹಕ್ಕುಪತ್ರ ನೀಡುವ [illegible]
ಮತ್ತು ಇತರೆ ಸಮಸ್ಯೆಗಳು ತೆಗೆದುಕೊಂಡು ಬರುತ್ತಿದ್ದಾರೆ ಸಾರ್ವಜನಿಕರ ಹಿತದೃಷ್ಟಿಯಿಂದ [illegible]
ಇಲಾಖೆಯವರಿಗೆ ದಾಖಲೆಗಳನ್ನು ಹಲವಾರು ಬಾರಿ ಲಿಖಿತವಾಗಿ ಬರೆದರು ಕೂಡ ದಾಖಲಾತಿಗಳನ್ನು
ಸಂಪೂರ್ಣವಾಗಿ ಇಲ್ಲಿಯವರಿಗೆ ನೀಡಿರುವುದಿಲ್ಲ, ಆದ್ದರಿಂದ ಪೋಲಿಸ್ ಸಹಕಾರದಿಂದ ಕಾಮಗಾರಿಯನ್ನು
ತಡೆಹಿಡಿಯಲು ಸದರಿ ದಾಖಲಾತಿಗಳನ್ನು ಕೊಟ್ಟ ನಂತರವೇ ಕಾಮಗಾರಿ ಪ್ರಾರಂಭಿಸಲು ಸೂಚಿಸಿದರು.

ಠರಾವು ಸಂಖ್ಯೆ (06) : ಸದರಿ ವಿಷಯದ ದೀರ್ಘಕಾಲ ಚರ್ಚಿಸಿ, ಸ್ಲಮ್ ಇಲಾಖೆಯವರು ಪುರಸಭೆ ವ್ಯಾಪ್ತಿಯಲ್ಲಿ ಇವರ ಇಲಾಖೆ ವತಿಯಿಂದ ನಡೆಯುತ್ತಿರುವ ಸ್ಲಮ್ ಬೋರ್ಡ್ ಮನೆಗಳ
ಕಾಮಗಾರಿಗಳ ಕುರಿತು ಸುಮಾರು 20 ವರ್ಷಗಳ ಹಿಂದೆ ಆಯ್ಕೆಯಾದ ವಾಂಬೆ ಫಲಾನುಭವಿಗಳಿಗೆ ಮತ್ತು
200 ಮನೆಗಳ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡದೇ ಇರುವುದನ್ನು ಕುರಿತು ಸುಮಾರು ಬಾರಿ ಪತ್ರ ಬರೆದು
ಅವರಿಂದ ಪ್ರಗತಿ ವರದಿ ಪಡೆಯಲು ಮತ್ತು ಜಿ+1 ಮನೆಗಳ ಅಂದಾಜು ಪತ್ರಿಕೆ, ನೀಲಿ ನಕ್ಷೆ, ಕಾಮಗಾರಿ
ಆದೇಶ, ಅಗ್ರೀಮೆಂಟ್ ಪ್ರತಿಗಳು ನೀಡದೇ ಇರುವುದರಿಂದ ಸದರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು
ಮತ್ತು ಈ ಕಾರ್ಯಾಲಯದಿಂದ ಕೇಳಿರುವ ದಾಖಲೆಗಳನ್ನು ನೀಡಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ
ಬರೆಯಲು ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯಾಧಿಕಾರಿಗಳಿಗೆ ಸೂಚಿಸುತ್ತಾ ಸರ್ವಾನು ಮತದಿಂದ ಠರಾವು ಪಾಸ
ಮಾಡಲಾಯಿತ್ತು.

ವಿಷಯ ಸಂಖ್ಯೆ (07) : ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಕಾಮಗಾರಿಗಳ ಕುರಿತು
ಚರ್ಚೆ.

ಪ್ರಸ್ತಾವನೆ ಸಂಖ್ಯೆ (07) : ಪುರಸಭೆ ಕಾರ್ಯಾಲಯದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಎಷ್ಟು? ಜನ ಕೆಲಸ ನಿರ್ವಹಿಸುತ್ತಿದ್ದಾರೆ, ಅದರಿ ಕುರಿತು ಪರಿಸರ ಅಭಿಯಂತರರು ತಿಳಿಸಿದರು.

ಠರಾವು ಸಂಖ್ಯೆ (07) : ಸದರಿ ವಿಷಯದ ಕುರಿತು ದೀರ್ಘಕಾಲ ಚರ್ಚಿಸಿ, ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಗುತ್ತಿಗೆದಾರರಿಂದ ಇ.ಎಸ್.ಐ ಮತ್ತು ಪಿ.ಎಫ್
ಸರಿಯಾದ ರೀತಿಯಿಂದ ಭರಿಸಿಕೊಂಡು ಯಾವುದೇ ತೊಂದರೆಯಾಗದಂತೆ ಕೆಲಸ ನಿರ್ವಹಿಸಲು ಸಭೆಯಲ್ಲಿ
ಒಪ್ಪಿ ಠರಾವು ಪಾಸ ಮಾಡಲಾಯಿತ್ತು.

ವಿಷಯ ಸಂಖ್ಯೆ (08) : ಸ್ಥಾಯಿ ಸಮೀತಿ ರಚನೆ ಮಾಡುವ ಕುರಿತು ಚರ್ಚೆ.

ಪ್ರಸ್ತಾವನೆ ಸಂಖ್ಯೆ (08) : ಸ್ಥಾಯಿ ಸಮೀತಿ ರಚನೆ ಮಾಡುವ ಕುರಿತು ಸಭೆಯಲ್ಲಿ ಮುಖ್ಯಾಧಿಕಾರಿ[illegible] ಮಾನ್ಯ ಅಧ್ಯಕ್ಷರು ಪುರಸಭೆ ಚಿಂಚೋಳಿ ರವರು ಸಭೆಯಲ್ಲಿ [illegible]
ಮುಖ್ಯಾಧಿಕಾರಿಗಳು ಮಾತನಾಡಿ ಸ್ಥಾಯಿ ಸಮೀತಿ ರಚನೆ ಮಾಡಬೇಕಾದರೆ !! ಜನ ಸ[illegible]
ಸದಸ್ಯರು ಕಡಿಮೆ ಆಗದಂತೆ, ಸದಸ್ಯರನ್ನು ಆಯ್ಕೆ ಮಾಡಲು ಸಭೆಯಲ್ಲಿ ಹಾಜರಿದ್ದ [illegible]
ಅದರಂತೆ ಪ್ರತಿ ಸದಸ್ಯರಿಗೆ ಒಬ್ಬ ಸೂಚಕರು ಈ ಕೆಳಗಿನಂತೆ ಆಯ್ಕೆ ಮಾಡಲಾಗಿದೆ.

Scanned with OKEN Scanner

| ಕ್ರ.ಸಂ | ಸೂಚಕರು | ಸ್ಥಾಯಿ ಸಮೀತಿ ಸದಸ್ಯರು |
|---|---|---|
| 1 | ಶ್ರೀ ಶಬ್ಬೀರ ಅಹ್ಮದ | ಶ್ರೀ ಅಬ್ದುಲ ಬಾಗೋಡ |
| 2 | ಶ್ರೀ ಸಂತೋಷ ಮಾಳಪೂರ | ಶ್ರೀ ರೂಪಕಲಾ ಕಟ್ಟಿಮನಿ |
| 3 | ಶ್ರೀ ಶಿವುಕುಮಾರ ಪೋಚಲಿ | ಶ್ರೀ ಜಗನ್ನಾಥ ಗುತ್ತೆದಾರ |
| 4 | ಶ್ರೀ ಬಸವರಾಜ ಸಿರ್ಸಿ | ಶ್ರೀ ನಾಗಪ್ಪ ಗುರಂಪಳ್ಳಿ |
| 5 | ಶ್ರೀ ಲಕ್ಷ್ಮೀಕಾಂತ ಸುಕಂದ | ಶ್ರೀ ಅನ್ವರ ಖತೀಬ |
| 6 | ಶ್ರೀ ಜಗದೇವಿ ಗಡಂತಿ | ಶ್ರೀಮತಿ ಕವಿತಾ ಬಸವರಾಜ |
| 7 | ಶ್ರೀಮತಿ ರಾಧಾಬಾಯಿ ಓಲಗೇರಿ | ಶ್ರೀಮತಿ ಫರ್ಜಾನ ಬೇಗಂ |

ಮೇಲ್ಕಂಡಂತೆ 07 ಜನ ಸೂಚಕರು ಸ್ಥಾಯಿ ಸಮೀತಿ ಸದಸ್ಯರಿಗೆ ಆಯ್ಕೆ ಮಾಡಿದರು. ಅದರಂತೆ ಸ್ಥಾಯಿ ಸಮೀತಿ ಅಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಮಾಡಲು 05 ಜನ ಸದಸ್ಯರು ಶ್ರೀ ಜಗನ್ನಾಥ ಗುತ್ತೆದಾರ ಇವರಿಗೆ ಸ್ಥಾಯಿ ಸಮೀತಿ ಅಧ್ಯಕ್ಷರಾಗಿ ಆಯ್ಕೆ ಮಾಡಿದರು.

ಠರಾವು ಸಂಖ್ಯೆ (07) : 05 ಜನ ಸ್ಥಾಯಿ ಸಮೀತಿ ಸದಸ್ಯರು ಶ್ರೀ ಜಗನ್ನಾಥ ಗುತ್ತೆದಾರ ಇವರಿಗೆ ಸ್ಥಾಯಿ ಸಮೀತಿ ಅಧ್ಯಕ್ಷರಾಗಿ ಆಯ್ಕೆ ಮಾಡಲಾಯಿತು ಅದಕ್ಕೆ ಸರ್ವ ಸದಸ್ಯರು ಒಪ್ಪಿ ಸರ್ವಾನುಮತದಿಂದ ಠರಾವು ಪಾಸ ಮಾಡಲಾಯಿತು.

ವಿಷಯ ಸಂಖ್ಯೆ (09) : ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳ ಕುರಿತು ಚರ್ಚೆ.

ಪ್ರಸ್ತಾವನೆ ಸಂಖ್ಯೆ (09) : ಬಯೋ ಮ್ಯಾಟ್ರೀಕ್ ಮೂಲಕ ಹಾಜರಾತಿ ಮಾಡುವ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು ಅದಕ್ಕೆ ಮುಖ್ಯಾಧಿಕಾರಿಗಳು ಮಾತನಾಡಿ ಬಯೋ ಮ್ಯಾಟ್ರೀಕ್ ಹಾಜರಾತಿ ಜಾರಿ ಮಾಡಲಾಗುವುದೆಂದು ಸಭೆಯಲ್ಲಿ ಮಂಡಿಸಿದರು.
2. ಮಾನ್ಯ ಅಧ್ಯಕ್ಷರು ಪುರಸಭೆ ಚಿಂಚೋಳಿ ರವರು ಮಾತನಾಡಿ ಪುರಸಭೆಯಿಂದ ನಿಯೋಜನೆ ಮೇಲೆ ಬೇರೆ ಕಛೇರಿಗೆ ಹೋದ ಸಿಬ್ಬಂದಿಗಳಿಗೆ ನಿಯೋಜನೆ ರದ್ದು ಪಡಿಸಲು ಸಭೆಯಲ್ಲಿ ವಿವರಿಸಿದರು.

ಠರಾವು ಸಂಖ್ಯೆ (09) : ಸದರಿ ವಿಷಯಗಳ ದೀರ್ಘಾಕಲಾ ಚರ್ಚಿಸಿ, 1.ಪುರಸಭೆ ಕಾರ್ಯಾಲಯದಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಬಯೋ ಮ್ಯಾಟ್ರೀಕ್ ಅಳವಡಿಸಿ ಅದರಂತೆ ವೇತನ ಪಾವತಿಸಲು ಸಭೆಯಲ್ಲಿ ಒಪ್ಪಿ ಸರ್ವಾನುಮತದಿಂದ ಠರಾವು ಪಾಸ ಮಾಡಲಾಯಿತು.
2. ಪುರಸಭೆಯಿಂದ ಬೇರೆ ಕಛೇರಿಗಳಿಗೆ ನಿಯೋಜನೆ ಮೇರೆಗೆ ಹೋದ ಸಿಬ್ಬಂದಿ ವರ್ಗದವರಿಗೆ ಆಡಳಿತ ಹಿತದೃಷ್ಟಿಯಿಂದ ಈ ಕಾರ್ಯಾಲಯಕ್ಕೆ ಅವರ ನಿಯೋಜನೆ ರದ್ದು ಪಡಿಸಿ ಪುನಃ ಪುರಸಭೆಗೆ ಹಿಂದುರಿಸಲು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ಒಪ್ಪಿ ಠರಾವು ಪಾಸ ಮಾಡಲಾಯಿತು.

ವಿಷಯ ಸಂಖ್ಯೆ () : ಅಧ್ಯಕ್ಷರ ಅಪ್ಪಣೆ ಮೇರೆಗೆ ಸಿ.ಎ ಸೈಟಗಳಿಗಾಗಿ ಬಂದಿ ಅರ್ಜಿಗಳ ಕುರಿತು ಚರ್ಚೆ.

ಪ್ರಸ್ತಾವನೆ ಸಂಖ್ಯೆ (09) : ದಿನಾಂಕ : 18.12.2024 ರಂದು 3 ಸಿ.ಎ ಸೈಟಗಳಿಗಾಗಿ 1. ವಿಜಯ ಕೆ ಮುಲಗುಂದಾ ಕಾಂಗ್ರೇಸ್ ಭವನ ಟ್ರಸ್ಟ ಬೆಂಗಳೂರು ಇವರಿಂದ ಸರ್ವೆ ನಂ 143/2 ಸಿ.ಎ ಸೈಟ್ ಏರಿಯಾ 1086.50 ಎಸ್‌ಕ್ಯೂ ತುರುರಿ ಕೃಷ್ಣರಾವ ಲೆಓಟ್ ಚಿಂಚೋಳಿ ಇವರು ಸಮೀನಾರ್, ಕಾನ್‌ಫೇರೆನ್ಸ, ವರ್ಕಶಾಪ್,ಕ್ಯಾಂಪೆನಿಂಗ್, ಇತರೆ ಕೆಲಸಕ್ಕೆ ಸಿ.ಎ ಸೈಟ್ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿರುತ್ತಾರೆ.
2. ವೈದ್ಯಾಧಿಕಾರಿ ಸರ್ಕಾರಿ ಆಯುರ್ವೇದ ಆಯುಷ್ಯ ಘಟಕ ಚಿಂಚೋಳಿ ಇವರು ಬಸ್ ನಿಲ್ದಾಣದ ಹತ್ತಿರ ಜಿಡಿಪಿ ಚಿಂಚೋಳಿ ಪುರಸಭೆ ವ್ಯಾಪ್ತಿಗೆ ಬರುವ 100x100 ಸರ್ಕಾರಿ ಆಯುಷ್ಯ ಘಟಕ ಚಿಂಚೋಳಿ ಕಟ್ಟಡ ಉಪಯೋಗಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಮು.ತಿ.ನೋ –

Scanned with OKEN Scanner

ಲಂಬಾಣಿ ವಿದ್ಯಾರ್ಥಿ ವಸತಿ ಗೃಹ ಚಿಂಚೋಳಿ ಇವರು ಅ...

... ಅಧ್ಯಕ್ಷರು ... ಹೊಂದಲು ಚಿಂಚೋಳಿ ಪುರಸಭೆ ವ್ಯಾಪ್ತಿಗೆ ಬರುವ 100...

... ವಸತಿ ಗೃಹಕ್ಕಾಗಿ ಸ್ವಂತ ಕಟ್ಟಡ ... ಸದಸ್ಯರು ಸಾಮೂಹಿಕ ಪ್ರಾರ್ಥನೆ ನಿಮಿತ್ತವಾಗಿ ...

... ಅರ್ಜಿ ಸಲ್ಲಿಸಿರುತ್ತಾರೆ.

... ಜಗನ್ನಾಥ ಕಟ್ಟಿ ಪುರಸಭೆ ಸದಸ್ಯರು ... ಸಲ್ಲಿಸಿರುತ್ತಾರೆ

... ಸದಸ್ಯರು ಸಿ.ಎ ಸೈಟ್ ಸಲುವಾಗಿ ಅರ್ಜಿ ಸಲ್ಲಿಸಿರುತ್ತಾರೆ

... ಕುರಿತು.

ಶ್ರೀ ಶಿವುಕುಮಾರ ಪೋಚಾಲಿ ಪುರಸಭೆ ಸದಸ್ಯರು ... ಮಾದರ ಚನ್ನಯ್ಯ ಭವನ ಸಿ.ಎ ಸೈಟ್ ಮಾಡಲು

ಶ್ರೀಮತಿ ರೂಪಕಲಾ ಕಟ್ಟಿಮನಿ ಚಂದಾಪೂರ ವ್ಯಾಪ್ತಿಯಲ್ಲಿ ... 29/*5 ಲೇಜೌಟ ನಲ್ಲಿ ಮುಸ್ಲಿಂ

ಅರ್ಜಿ ಸಲ್ಲಿಸಿರುತ್ತಾರೆ.

ಶ್ರೀ ಶಬ್ಬೀರ ಅಹ್ಮದ ಪುರಸಭೆ ಸದಸ್ಯರು ಸರ್ವೆ ನಂ 205. 30/1.29/*/1. 29/*5 ...

ಸಮುದಾಯ ಭವನ ನಿರ್ಮಾಣ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ.

ಠರಾವು ಸಂಖ್ಯೆ (09) : ಸದರಿ ವಿಷಯಗಳ ಕುರಿತು ದೀರ್ಘಕಾಲ ಚರ್ಚಿಸಿ ಬಂದ ಏಳು ಅರ್ಜಿಗಳಲ್ಲಿ ಸಧ್ಯಕ್ಕೆ ಎರಡು ಅರ್ಜಿಗಳನ್ನು ಸಾರ್ವಜನಿಕರ ಹಿತದೃಷ್ಟಿಯಾಗಿ ಈ ಕೆಳಗಿನಂತೆ

1. ವಿಜಯ ಕೆ ಮುಲಗುಂದಾ ಕಾಂಗ್ರೇಸ್ ಭವನ ಟ್ರಸ್ಟ್ ಬೆಂಗಳೂರು ಇವರಿಂದ ಸರ್ವೆ ನಂ 143/2 ಸಿ.ಎ ಸೈಟ್ ಏರಿಯಾ 1086.50 ಎಸ್‌ಕ್ವ್ಯೂ ಪುರುರಿ ಕೃಷ್ಣರಾವ ಲೇಔಟ್ ಚಿಂಚೋಳಿ ಇವರು ಸಮೀನಾರ್, ಕಾನ್ಫೇರೆನ್ಸ್, ವರ್ಕಶಾಪ್,ಕ್ಯಾಂಪೆನಿಂಗ್, ಇತರೆ ಕೆಲಸಕ್ಕೆ ಸಿ.ಎ ಸೈಟ್ ಕೆಲಸಕ್ಕಾಗಿ ಅರ್ಜಿದಮ್ಮ ಕಟ್ಟಡ ನಿರ್ಮಾಣ ಮಾಡಲು ನಿವೇಶನವನ್ನು ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತ್ತು.

2. ವೈದ್ಯಾಧಿಕಾರಿ ಸರ್ಕಾರಿ ಆರ್ಯುವೇದ ಆಯುಷ್ಯ ಘಟಕ ಚಿಂಚೋಳಿ ಇವರು ಬಸ್ ನಿಲ್ದಾಣದ ಹತ್ತಿರ ಇರುವ ಚಿಂಚೋಳಿ ಪುರಸಭೆ ವ್ಯಾಪ್ತಿಗೆ ಬರುವ 100x100 ಸರ್ಕಾರಿ ಆಯುಷ್ಯ ಘಟಕ ಚಿಂಚೋಳಿ ಕಟ್ಟಡ ನಿರ್ಮಾಣ ಮಾಡಲು ನಿವೇಶನವನ್ನು ನೀಡಲು ಸಭೆಯಲ್ಲಿ ನಿರ್ಣಯಿಸಲಾಯಿತ್ತು.

ಇರುವ 02 ಸಿ.ಎ ಸೈಟ್ ಅರ್ಜಿಗಳನ್ನು ನಿವೇಶನ ಕಟ್ಟಡಕ್ಕಾಗಿ ಅವರು ಕೇಳಿರುವ ಸ್ಥಳಗಳಲ್ಲಿ ಸಿ.ಎ ಸೈಟ್ ನೀಡಲು ನಿಯಮದಂತೆ ಅವರಿಂದ ದಾಖಲಾತಿಗಳನ್ನು ಪಡೆದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲು ಮುಖ್ಯಾಧಿಕಾರಿಗಳಿಗೆ ಸೂಚಿಸುತ್ತ ಸಭೆಯಲ್ಲಿ ಒಪ್ಪಿ ಸರ್ವಾನುಮತದಿಂದ ಠರಾವು ಪಾಸ ಮಾಡಲಾಯಿತ್ತು.

ವಿಷಯ ಸಂಖ್ಯೆ (10) : ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾನೂನು ಸಲಹೆಗಾರರ ಬದಲಾವಣೆ ಕುರಿತು ಚರ್ಚೆ.

ಪ್ರಸ್ತಾವನೆ ಸಂಖ್ಯೆ (10) : ಮಾನ್ಯ ಅಧ್ಯಕ್ಷರು ಪುರಸಭೆ ಚಿಂಚೋಳಿ ರವರು ಮಾನತಾಡಿ ಪುರಸಭೆ ಕಾನೂನು ಸಲಹೆಗಾರರು ಬದಲಾವಣೆ ಮಾಡಲು ಸಭೆಯಲ್ಲಿ ತಿಳಿಸಿದರು, ಆದಕ್ಕೆ ಶ್ರೀ ಶಿವುಕುಮಾರ ಪೋಚಾಲಿ ಸದಸ್ಯರು, ಶ್ರೀ ಭೀಮರಾವ ರಾಠೋಡ ಸದಸ್ಯರು, ಶ್ರೀಮತಿ ಜಗದೇವಿ ಗಡಂತಿ ಸದಸ್ಯರು ಮಾತನಾಡಿ ತಾವು ಏಕಾಏಕಿ ಪುರಸಭೆ ಕಾನೂನು ಸಲಹೆಗಾರರನ್ನು ತೆಗೆಯಬೇಡಿ ಅವರಿಗೆ ನೀಡಬೇಕಾದ ದಾವೆಗಳ ಮೊತ್ತವನ್ನು ಪಾವತಿಸಿ ಅವರಿಗೆ ತೆಗೆಯಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಸದಸ್ಯರು ತಿಳಿಸಿದರು.

ತದನಂತರ ಮುಖ್ಯಾಧಿಕಾರಿ ಮಾತನಾಡಿ ಈಗಾಗಲೇ ದಿನಾಂಕ : 08.10.2024 ರಂದು ನಡೆದ ಸಾಮಾನ್ಯ ಸಭೆಯಲ್ಲಿ ಕಾನೂನು ಸಲಹೆಗಾರರಿಗೆ ಬದಲಾವಣೆ ಮಾಡಬೇಕಾದರೆ ಅವರಿಂದ ದಾಖಲಾತಿಗಳನ್ನು ಪಡೆಯಲು ಪುರಸಭೆ ವತಿಯಿಂದ ದಿನಾಂಕ : 17.12.2024 ರಂದು ಪತ್ರ ಬರೆಯಲಾಯಿತ್ತು, ಅದರಂತೆ ದಿನಾಂಕ : 18.12.2024 ರಂದು ಕಾನೂನು ಸಲಹೆಗಾರರು ಪುರಸಭೆ ಇವರು ನಾವು ಕೇಳಿರುವ ದಾಖಲೆಗಳನ್ನು ನೀಡಬೇಕಾದರೆ 1 ತಿಂಗಳು ಕಾಲಾವಕಾಶ ನೀಡಬೇಕಾಗಿ ಪತ್ರ ನೀಡಿರುತ್ತಾರೆ, ಆದರೆ ಕಾನೂನು ಸಲಹೆಗಾರರಿಗೆ ಏಕಾಏಕಿ ಬದಲಾವಣೆ ಮಾಡಿದರೆ ಪುರಸಭೆ ನಡೆಯುತ್ತಿರುವ ಕೇಸುಗಳ ಮೇಲೆ ಪರಿಣಾಮ ಬೀಳುತ್ತ ಇದರಿಂದ ಪುರಸಭೆಗೆ ಹಾನಿಯಾಗಬಹುದು ಎಂದು ಮುಖ್ಯಾಧಿಕಾರಿಗಳು ಸಭೆಯಲ್ಲಿ ಕಾನೂನು ಸಲಹೆಗಾರರನ್ನು

ಮು.ತಿ.ನೋ ...

Scanned with OKEN Scanner



File No. DMA/DEV/OTH/157/2025-DMA_DEV-DIRECTORATE OF MUNICIPAL ADMINISTRATION (Computer No. 1965852)
Generated from eOffice by SAMYUKTA, DMA_FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 ...

ಬದಲಾವಣೆ ಮಾಡಬೇಡಿ ಎಂದು ಅಭಿಪ್ರಾಯ ಸಭೆಯಲ್ಲಿ ವ್ಯಕ್ತಪಡಿಸಿದರು. ಒಂದು ವೇಳೆ ಬದಲಾವಣೆ ಮಾಡಿದರೆ ಪುರಸಭೆ ಸಂಬಂಧಿಸಿದ ನಡೆಯುತ್ತಿರುವ ಕೇಸುಗಳು ಮೇಲೆ ಏನಾದರೂ ಪರಿಣಾಮ ಬೀರಿದರೆ ಸಂಪೂರ್ಣ ಜವಾಬ್ದಾರಿ ಕೌನ್ಸಿಲ್ ಬಾಡಿದು ಆಗಿರುತ್ತದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು ಕಾನೂನು ಸಲಹೆಗಾರರಿಗೆ ಬದಲಾವಣೆ ಮಾಡಬೇಕೆಂದು ಸಭೆಯಲ್ಲಿ ವಿವರಿಸಿದರು.

<u>ಠರಾವು ಸಂಖ್ಯೆ</u> (10) : ಸದರಿ ವಿಷಯಗಳ ಕುರಿತು ದೀರ್ಘಕಾಲ ಚರ್ಚಿಸಿ. ಶ್ರೀ ಶ್ರೀಮಂತ ಕಟ್ಟಿಮನಿ ಪುರಸಭೆ ಕಾನೂನು ಸಲಹೆಗಾರರಿಗೆ ಬದಲಾವಣೆ ಮಾಡಲು ಮತ್ತು ಮುಂದಿನ ಸಾಮಾನ್ಯ ಸಭೆಯಲ್ಲಿ (ಅವರಿಗೆ ನೀಡಬೇಕಾಗಿರುವ ಹಣವನ್ನು ಸದರಿಯವರಿಗೆ ವಹಿಸಿರುವ ಪ್ರಕರಣಗಳನ್ನು ಸಂಪೂರ್ಣ ಮಾಹಿತಿ ಮತ್ತು ದಾಖಲೆಗಳನ್ನು ನೀಡಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು, ಮತ್ತು ಮುಂದಿನ ಸಾಮಾನ್ಯ ಸಭೆಯಲ್ಲಿ ಕಾನೂನು ಸಲಹೆಗಾರರಾಗಿ ಬಂದಿ ಅರ್ಜಿಗಳನ್ನು ಪರಿಶೀಲಿಸಿ ಪತ್ರಿಕೆಯಲ್ಲಿ ನಿಯಮದಂತೆ ಪ್ರಕಟಿಸಿ ಪುರಸಭೆಯ ಹೊಸ ಕಾನೂನು ಸಲಹೆಗಾರರನ್ನು ನಿಯೋಜಿಸಲು ಸಭೆಯಲ್ಲಿ ಒಪ್ಪಿ ಸರ್ವಾನುಮತದಿಂದ ಠರಾವು ಪಾಸ ಮಾಡಲಾಯಿತ್ತು.

ಮುಖ್ಯಾಧಿಕಾರಿಗಳು ವಂದನಾರ್ಪಣೆಯೊಂದಿಗೆ ಸಾಮಾನ್ಯ ಸಭೆಯನ್ನು ಮುಕ್ತಯಾಗೊಳಿಸಲಾಯಿತ್ತು.

ಅಧ್ಯಕ್ಷರು
ಪುರಸಭೆ ಚಿಂಚೋಳಿ

ಮುಖ್ಯಾಧಿಕಾರಿ
ಪುರಸಭೆ ಚಿಂಚೋಳಿ

Scanned with OKEN Scanner

# ಪುರಸಭಾ ಕಾರ್ಯಾಲಯ

ಮಾಗಡಿ–562120, ರಾಮನಗರ ಜಿಲ್ಲೆ.

ಸಂಖ್ಯೆ:ಪುಕಾಮಾ/ಸಭೆ/02/2024–25 ದಿನಾಂಕ:– 10.02.2025

**–:ಸಾಮಾನ್ಯ ಸಭೆಯ ನಡಾವಳಿ:–**

ದಿನಾಂಕ:– 10.02.2025 ರ ಸೋಮವಾರ ಅಪರಾಹ್ನ 2.30 ಗಂಟೆಗೆ ಪುರಸಭಾ ಅಧ್ಯಕ್ಷರಾದ ಶ್ರೀಮತಿ ರಮ್ಯಾ ನರಸಿಂಹಮೂರ್ತಿ ರವರ ಅಧ್ಯಕ್ಷತೆಯಲ್ಲಿ ಪುರಸಭಾ ಸಭಾಂಗಣದಲ್ಲಿ ಮಾನ್ಯ ಶಾಸಕರು, ಮಾನ್ಯ ಉಪಾಧ್ಯಕ್ಷರು, ಸದಸ್ಯರುಗಳು/ನಾಮ ನಿರ್ದೇಶನ ಸದಸ್ಯರುಗಳು ಹಾಜರಿದ್ದು ನಡೆಸಿದ ಕೌನ್ಸಿಲ್ ಸಾಮಾನ್ಯ ಸಭೆಯ ನಡಾವಳಿಗಳು

| –:ಹಾಜರಿ:– | –:ಗೈರು ಹಾಜರಿ:– | –:ಒಟ್ಟು ಜುಮ್ಲಾ:– |
|---|---|---|
| ಸದಸ್ಯರು– 21 | ಸದಸ್ಯರು–02 | ಸದಸ್ಯರು–23 |
| ಶಾಸಕರು–01 | ನಾಮ ನಿರ್ದೇಶನ ಸದಸ್ಯರು–01 | ಶಾಸಕರು–01 |
| ನಾಮ ನಿರ್ದೇಶನ ಸದಸ್ಯರು–04 | | ನಾಮ ನಿರ್ದೇಶನ ಸದಸ್ಯರು–05 |

**"ವಿಷಯ ಮತ್ತು ತೀರ್ಮಾನಗಳು"**

| | |
|---|---|
| **ವಿಷಯ ಸಂಖ್ಯೆ:44** | ಮಾಗಡಿ ತಾಲ್ಲೂಕು ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರು ರವರು ಮಾಗಡಿ ಟೌನ್‌ನಲ್ಲಿ ಕಾಂಗ್ರೇಸ್ ಭವನ ನಿರ್ಮಾಣ ಮಾಡಲು ಸೂಕ್ತ ನಿವೇಶನವನ್ನು ನೀಡಲು ಕೋರಿದ್ದು ಈ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ. |
| **ತೀರ್ಮಾನ:** | ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಮಾಗಡಿ ತಾಲ್ಲೂಕು ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷರು ರವರು ನೀಡಿರುವ ಮನವಿಯನ್ನು ಪರಿಶೀಲಿಸಿ ಮಾಗಡಿ ಟೌನ್ ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮಿ ಆಡಿಟೋರಿಯಂ ಪಕ್ಕ ಪುರಸಭಾ ಖಾತಾ ನಂ.118/2106/1942 ರಲ್ಲಿ ಒಟ್ಟು ಅಳತೆ 130+256/2 * 200+166/2ರ ಪೈಕಿ ಅಳತೆ ಪೂರ್ವ–ಪಶ್ಚಿಮ 60 ಅಡಿಗಳು ಉತ್ತರ–ದಕ್ಷಿಣ 70 ಅಡಿಗಳಿಗೆ ಚೆಕ್ಕುಬಂದಿ ಪೂರ್ವ:– ಪುರಸಭಾ ಸ್ವತ್ತು ಮತ್ತು ರಸ್ತೆ ಪಶ್ಚಿಮ:– ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮಿ ಆಡಿಟೋರಿಯಂ ಉತ್ತರ: ಇದೇ ನಂಬರ್‌ನ ಉಳಿಕೆ ಪುರಸಭಾ ಸ್ವತ್ತು ದಕ್ಷಿಣ:– ಇಂದಿರಾ ಕ್ಯಾಂಟೀನ್ ಈ ಮಧ್ಯೆ ಇರುವ ಜಾಗವನ್ನು ಕಾಂಗ್ರೇಸ್ ಭವನ ನಿರ್ಮಾಣ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ರವರಿಂದ ಅನುಮತಿ ಪಡೆದು ನಿಯಮಾನುಸಾರ ನೀಡಲು ಒಪ್ಪಿ ತೀರ್ಮಾನಿಸಲಾಯಿತು. |

**ಸಹಿ/–**
**ಅಧ್ಯಕ್ಷರು**
**ಪುರಸಭೆ, ಮಾಗಡಿ**

ಯಥಾ ನಕಲು

ಮುಖ್ಯಾಧಿಕಾರಿ
ಪುರಸಭೆ, ಮಾಗಡಿ



File No. DMA/DEV/OTH/90/2025-DMA_DEV-DIRECTORATE OF MUNICIPAL ADMINISTRATION (Computer No. 1829952)
Generated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 12:

# ಪುರಸಭಾ ಕಾರ್ಯಾಲಯ

ಮಾಗಡಿ–562120, ರಾಮನಗರ ಜಿಲ್ಲೆ.

ಸಂಖ್ಯೆ:ಪುಕಾಮಾ/ವಿಶೇಷ ಸಭೆ/01/2025–26 ದಿನಾಂಕ:– 28.04.2025

## –:ಸಾಮಾನ್ಯ ಸಭೆಯ ನಡಾವಳಿ:–

ದಿನಾಂಕ:– 28.04.2025 ರ ಸೋಮವಾರ ಅಪರಾಹ್ನ 3.00 ಗಂಟೆಗೆ ಪುರಸಭಾ ಅಧ್ಯಕ್ಷರಾದ ಶ್ರೀಮತಿ ರಮ್ಯಾ ನರಸಿಂಹಮೂರ್ತಿ ರವರ ಅಧ್ಯಕ್ಷತೆಯಲ್ಲಿ ಪುರಸಭಾ ಸಭಾಂಗಣದಲ್ಲಿ ಮಾನ್ಯ ಶಾಸಕರು, ಮಾನ್ಯ ಉಪಾಧ್ಯಕ್ಷರು, ಸದಸ್ಯರುಗಳು/ನಾಮ ನಿರ್ದೇಶನ ಸದಸ್ಯರುಗಳು ಹಾಜರಿದ್ದು ನಡೆಸಿದ ಕೌನ್ಸಿಲ್ ವಿಶೇಷ ಸಭೆಯ ನಡಾವಳಿಗಳು

| –:ಹಾಜರಿ:– | –:ಗೈರು ಹಾಜರಿ:– | –:ಒಟ್ಟು ಜುಮ್ಲಾ:– |
|---|---|---|
| ಸದಸ್ಯರು– | ಸದಸ್ಯರು– | ಸದಸ್ಯರು–23 |
| ಶಾಸಕರು– | ನಾಮ ನಿರ್ದೇಶನ ಸದಸ್ಯರು– | ಶಾಸಕರು–01 |
| ನಾಮ ನಿರ್ದೇಶನ ಸದಸ್ಯರು– | | ನಾಮ ನಿರ್ದೇಶನ ಸದಸ್ಯರು–05 |

### "ವಿಷಯ ಮತ್ತು ತೀರ್ಮಾನಗಳು"

**ವಿಷಯ ಸಂಖ್ಯೆ: 3** ಅಧ್ಯಕ್ಷರ ಅಪ್ಪಣೆ ಮೇರೆ ಬರಬಹುದಾದ ಇನ್ನಿತರೆ ವಿಚಾರಗಳು

**ವಿಷಯ ಸಂಖ್ಯೆ: 3/2** ಮಾಗಡಿ ತಾಲ್ಲೂಕು ಬ್ಲಾಕ್ ಕಾಂಗ್ರೇಸ್ ಕಛೇರಿ ಭವನ ನಿರ್ಮಾಣ ಮಾಡಲು ಪುರಸಭಾ ವ್ಯಾಪ್ತಿಯಲ್ಲಿ ಲಭ್ಯವಿರುವ ಪುರಸಭಾ ನಿವೇಶನವನ್ನು ನೀಡಲು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.

**ತೀರ್ಮಾನ** ವಿಷಯದ ಬಗ್ಗೆ ಚರ್ಚಿಸಿದ ಸಭೆಯು ಮಾಗಡಿ ತಾಲ್ಲೂಕು ಬ್ಲಾಕ್ ಕಾಂಗ್ರೇಸ್ ಕಛೇರಿ ಭವನ ನಿರ್ಮಾಣ ಮಾಡಲು ಪುರಸಭಾ ವ್ಯಾಪ್ತಿಯಲ್ಲಿ ಸೂಕ್ತ ನಿವೇಶನ ನೀಡುವಂತೆ ಅಧ್ಯಕ್ಷರು, ಬ್ಲಾಕ್ ಕಾಂಗ್ರೇಸ್ ಸಮಿತಿ, ಮಾಗಡಿ ತಾಲ್ಲೂಕು ರವರು ಮನವಿ ಸಲ್ಲಿಸಿರುತ್ತಾರೆ. ಅದರಂತೆ ಮಾಗಡಿ ಪುರಸಭಾ ವ್ಯಾಪ್ತಿಯ ಮಾಗಡಿ ಟೌನ್ ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮಿ ಆಡಿಟೋರಿಯಂ ಪಕ್ಕ ಪುರಸಭಾ ಖಾತಾ ನಂ.118/2106/1942 ರಲ್ಲಿ ಒಟ್ಟು ಅಳತೆ 130+256/2 * 200+166/2ರ ಒಟ್ಟು 35319ಚ.ಅಡಿಗಳ ಪೈಕಿ ಅಳತೆ ಪೂರ್ವ–ಪಶ್ಚಿಮ 60 ಅಡಿಗಳು ಉತ್ತರ–ದಕ್ಷಿಣ 70 ಅಡಿಗಳಿಗೆ ಚೆಕ್ಕುಬಂದಿ ಪೂರ್ವ:– ಪುರಸಭಾ ಸ್ವತ್ತು ಮತ್ತು ರಸ್ತೆ ಪಶ್ಚಿಮ:– ಶ್ರೀಶ್ರೀಶ್ರೀ ಶಿವಕುಮಾರ ಸ್ವಾಮಿ ಆಡಿಟೋರಿಯಂ ಉತ್ತರ: ಇದೇ ನಂಬರ್‌ನ ಉಳಿಕೆ ಪುರಸಭಾ ಸ್ವತ್ತು ದಕ್ಷಿಣ:– ಇಂದಿರಾ ಕ್ಯಾಂಟೀನ್ ಈ ಮಧ್ಯೆ ಇರುವ ಜಾಗವನ್ನು ಕಾಂಗ್ರೇಸ್ ಭವನ ನಿರ್ಮಾಣ ಮಾಡಲು ದಿನಾಂಕ: 17.03.2025 ರಂದು ಪತ್ರಿಕಾ ಪ್ರಕಟಣೆ ಹೊರಡಿಸಲಾಗಿ ದಿನಾಂಕ: 19.03.2025ರಂದು ಜನವಾಹಿನಿ ಪತ್ರಿಕೆಯಲ್ಲಿ ಮತ್ತು ರೇಷ್ಮೇ ಸೀಮೆ ಪತ್ರಿಕೆಯಲ್ಲಿ ಪ್ರಕಟಣೆ ಪ್ರಕಟವಾಗಿರುತ್ತದೆ. ಈ ಸಂಬಂಧ ಯಾವುದೇ ಆಕ್ಷೇಪಣೆಗಳು ಸ್ವೀಕೃತಿಯಾಗಿರುವುದಿಲ್ಲ ಹಾಗೂ ಸರ್ಕಾರದ ಆದೇಶ ಸಂ:ನಅಇ 129 ಟಿಎಂಡಿ 2002, ಬೆಂಗಳೂರು ದಿನಾಂಕ: 02.06.2003ರಂತೆ ಕಾಂಗ್ರೇಸ್ ಭವನ ನಿರ್ಮಾಣ ಮಾಡಲು ನಿವೇಶನ ನೀಡುವ ಬಗ್ಗೆ ನಿರ್ದೇಶನ ಇರುವುದಿಲ್ಲ ಆದ್ದರಿಂದ ಸದರಿ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪ್ರಸ್ತುತ ಚಾಲ್ತಿ ಸಾಲಿನ ಉಪನೋಂದಣಾಧಿಕಾರಿಗಳ ಮಾರುಕಟ್ಟೆ ಬೆಲೆಗೆ ನಿವೇಶನವನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಅನುಮೋದನೆ ಪಡೆದು ನಿವೇಶನವನ್ನು ಮಂಜೂರು ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಹಿ/–
ಅಧ್ಯಕ್ಷರು
ಪುರಸಭೆ, ಮಾಗಡಿ

ಮೂಲ ನಕಲು

ಮುಖ್ಯಾಧಿಕಾರಿ
ಪುರಸಭೆ, ಮಾಗಡಿ



File No. DMA/DEV/OTH/90/2025-DMA_DEV-DIRECTORATE OF MUNICIPAL ADMINISTRATION (Computer No. 1829952)
Generated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 12:1

# ಪುರಸಭೆ ಕಾರ್ಯಾಲಯ ಅಣ್ಣಿಗೇರಿ.

**ಮಾನ್ಯ ಆಡಳಿತಾಧಿಕಾರಿಗಳು ಪುರಸಭೆ ಅಣ್ಣಿಗೇರಿ ಹಾಗೂ ಉಪವಿಭಾಗಾಧಿಕಾರಿಗಳು ಧಾರವಾಡ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 28-04-2025 ರಂದು ಜರುಗಿದ ವಿಶೇಷ ಸಾಮಾನ್ಯ ಸಭೆಯ ನಡುವಳಿಗಳು.**

**ವಿಷಯ ನಂ.13** ನಾಗರೀಕ ಸೌಲಭ್ಯಕ್ಕಾಗಿ ಮೀಸಲಿರಿಸಿದ ನಿವೇಶನಗಳ ಹಂಚಿಕೆ ಕುರಿತು ಬಂದ ಅರ್ಜಿಗಳ ವಿಚಾರ.

**ಠರಾವು ನಂ : 206** ವಿಷಯಕ್ಕೆ ಸಂಬಂಧಪಟ್ಟ ಕಡತವನ್ನು ಕಚೇರಿ ಟಿಪ್ಪಣಿಯೊಂದಿಗೆ ಪರಿಶೀಲಿಸಲಾಯಿತು.

ಅಣ್ಣಿಗೇರಿ ಪುರಸಭೆ ವ್ಯಾಪ್ತಿಯಲ್ಲಿ ವಿವಿಧ ವಸತಿ ಬಿನ್ ಶೇತ್ಕಿ ಬಡಾವಣೆಗಳಲ್ಲಿ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಒಟ್ಟು 18 ನಿವೇಶನಗಳು ಇದ್ದು, 1) ಮಾನ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ : ನಅಇ 27 ಟಿಟಿಪಿ 2016, ದಿನಾಂಕ 24-05-2017 ಹಾಗೂ (ದಿನಾಂಕ: 10-06-2017ರ ರಾಜ್ಯಪತ್ರ) 2) ಮಾನ್ಯ ಸರಕಾರದ ಅಧೀನ ಕಾರ್ಯದರ್ಶಿ (ಪ್ರ), (ಪೌರಾಡಳಿತ-2 ಮತ್ತು ಮಂಡಳಿ) ನಗರಾಭಿವೃದ್ಧಿ ಇಲಾಖೆ ಬೆಂಗಳೂರು, ರವರ ಸುತ್ತೋಲೆ ಸಂಖ್ಯೆ:ಅನಇ/01/ಟಿಎಂಡಿ/2018 ದಿನಾಂಕ: 30-01-2018. ರಂತೆ ಅವುಗಳನ್ನು ದಿನಾಂಕ: 31-12-2025ರ ಅಂತ್ಯಕ್ಕೆ ಇರುವಂತೆ ದಿನಾಂಕ: 01-01-2025 ರಂದು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಅಧಿಸೂಚಿಸಿ ಪ್ರಕಟಣೆ ಹೊರಡಿಸಲಾಗಿರುತ್ತದೆ. ಅದೇ ರೀತಿ ಸರ್ಕಾರದ ನಿರ್ದೇಶನಗಳಂತೆ ಪ್ರಾಥಮಿಕ ಆದ್ಯತೆಯ ಮೇರೆಗೆ ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡುವ ಕುರಿತು ಅಣ್ಣಿಗೇರಿ ತಾಲ್ಲೂಕಿನ ಎಲ್ಲ ಸರಕಾರಿ ಇಲಾಖೆ ಹಾಗೂ ನಿಗಮ ಮಂಡಳಿಗಳಿಗೆ ಅಗತ್ಯವಿದ್ದಲ್ಲಿ ಈ ಕುರಿತು ಲಿಖಿತ ಕೋರಿಕೆ ಸಲ್ಲಿಸುವಂತೆ ದಿನಾಂಕ: 02-01-2025ರಂದು ಪತ್ರ ಮೂಲಕ ಕೋರಲಾಗಿರುತ್ತದೆ. ಆದರೆ ಯಾವುದೇ ಇಲಾಖೆ/ಮಂಡಳಿಗಳು ಯಾವುದೇ ನಿವೇಶನಗಳನ್ನು ಕೋರಿ ಈ ಕಾರ್ಯಾಲಯಕ್ಕೆ ಪತ್ರಗಳನ್ನು ಸಲ್ಲಿಸಿರುವದಿಲ್ಲ. ಸರ್ಕಾರದ ಮಾರ್ಗಸೂಚಿಗಳಂತೆ ಕಾಯ್ದಿರಿಸಲಾದ ಒಟ್ಟು ನಿವೇಶನಗಳಲ್ಲಿ ಶೇಕಡಾ 10%ರಷ್ಟು ನಿವೇಶನಗಳನ್ನು ವಿವಿಧ ಸಂಘ-ಸಂಸ್ಥೆಗಳಿಗೆ ನೀಡಲು ಅವಕಾಶ ಇರುವ ಬಗ್ಗೆ ಕಂದಾಯ ಅಧಿಕಾರಿಗಳು ಹಾಗೂ ಮುಖ್ಯಾಧಿಕಾರಿಗಳು ಸಭೆಗೆ ವಿವರವಾಗಿ ದಾಖಲೆಗಳೊಂದಿಗೆ ಮಂಡಿಸಿದರು.

ಮುಂದುವರೆದು ನಿವೇಶನಗಳನ್ನು 30 ವರ್ಷದ ಅವಧಿಗೆ ಗುತ್ತಿಗೆಗೆ ನೀಡಲು ಕೋರಿ ಈ ಕೆಳಕಂಡ ಸಂಘ-ಸಂಸ್ಥೆಗಳು ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ ವಿವರಿಸಲಾಯಿತು.

| ಅ.ನಂ | ಅರ್ಜಿದಾರರ ವಿವರ | ಉದ್ದೇಶ | ಕೋರಲಾದ ನಿವೇಶನದ ವಿವರ | ಪಾವತಿಸ ಬೇಕಾದ ಗುತ್ತಿಗೆ ಮೊತ್ತ | ಶರಾ |
|---|---|---|---|---|---|
| 1 | ಶ್ರೀ ವಿಜಯ ಮುಳಗುಂದ, ಟ್ರಸ್ಟೀ, ಕಾಂಗ್ರೇಸ್ ಭವನ ಟ್ರಸ್ಟ (ರಿ). ಇಂದಿರಾಗಾಂಧಿ ಭವನ, ನಂ.-12, ಜಸ್ಮಾ ಭವನ ರಸ್ತೆ, ಬೆಂಗಳೂರು. ಇವರ ಪತ್ರ ದಿನಾಂಕ: 01-03-2025. | ಕಾಂಗ್ರೇಸ್ ಸಾರ್ವಜನಿಕ ಜನ ಸಂಪರ್ಕ ಕಾರ್ಯಾಲಯ ಹಾಗೂ ವಿವಿದೋದ್ದೇಶ ಚಟುವಟಿಕೆ ಉದ್ದೇಶಕ್ಕೆ | ರಿ.ಸ.ನಂ 1080/2ಅ+2ಬ ಪ್ಲಾಟ ನಂ 2 ಕ್ಷೇತ್ರ (1668.800 ಚ.ಮೀ) ನವಲಗುಂದ ರಸ್ತೆ, ಅಮೃತೇಶ್ವರ ಬಡಾವಣೆ ಪಿ.ಐ.ಡಿ. ನಂ. - 23-505-322ಬಿ | 31,70,750 ರೂ.ಗಳು | 3 ಅರ್ಜಿದಾರರು ಕಾಂಗ್ರೇಸ ಭವನ ಟ್ರಸ್ಟ್ ಕಟ್ಟಡ ನಿರ್ಮಾಣಕ್ಕಾಗಿ ಕೋರಿರುತ್ತಾರೆ. |
| 2 | ಮಾನ್ಯ ಶ್ರೀ ಎನ್.ಹೆಚ್ ಕೋನರಡ್ಡಿ, ಶಾಸಕರು, ನವಲಗುಂದ ವಿಧಾನಸಭಾ ಕ್ಷೇತ್ರ, ಲಿಂಗರಾಜ್ ಸರ್ಕಲ್, ನವಲಗುಂದ ಇವರ ಪತ್ರ ದಿನಾಂಕ: 17-03-2025 | | | | |
| 3 | ಶ್ರೀ ಮಂಜುನಾಥ ಮಾಯಣ್ಣವರ, ಅಧ್ಯಕ್ಷರು, ಅಣ್ಣಿಗೇರಿ ಬ್ಲಾಕ್ ಕಾಂಗ್ರೇಸ್ ಅಣ್ಣಿಗೇರಿ. ಇವರ ಪತ್ರ ದಿನಾಂಕ: 25-03-2025 | | | | |



File No. DMA/DEV/OTH/80/2025-DMA DEV-DIRECTORATE OF MUNICIPAL ADMINISTRATION (Computer No. 1807222)

| | | | | | |
|---|---|---|---|---|---|
| 4 | ಕಾರ್ಯದರ್ಶಿ, ಡಾ॥ ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆ, ಅಂತೂರ-ಬೆಂತೂರ ತಾ॥,ಜಿ॥ ಗದಗ ಅರ್ಜಿ ದಿನಾಂಕ: 13-02-2025 ಹಾಗೂ 05-03-2025 | ಶೈಕ್ಷಣಿಕ ಉದ್ದೇಶಕ್ಕೆ | ಸುರಕೋಡ ಪ್ಲಾಟ ಪುರಸಭೆ ಎದುರಿಗೆ (ಶಾಲೆಗೆ ಬಿಟ್ಟ ಜಾಗೆ) ಸಿಟಿ ಸರ್ವೆ ನಂ 44ಜಿ ಪ್ಲಾಟ ನಂ 90 ಕ್ಷೇತ್ರ 2731.605 ಚ.ಮೀ | 43,70,568 ರೂ.ಗಳು | |

ಈ ಮೇಲ್ಕಾಣಿಸಿದಂತೆ ಸ್ವೀಕೃತವಾದ ಬೇಡಿಕೆಯ ಅರ್ಜಿಗಳ ಬಗ್ಗೆ ಚರ್ಚಿಸಿ, ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಲಾದ ಒಟ್ಟು 18 ನಿವೇಶನಗಳಲ್ಲಿ ಶೇಕಡಾ 10% ರಷ್ಟು ನಿವೇಶನಗಳನ್ನು ಸಂಘ-ಸಂಸ್ಥೆಗಳಿಗೆ ಗುತ್ತಿಗೆಗೆ ನೀಡಲು ಅವಕಾಶ ಇದ್ದು, ಸದರ 02 ನಿವೇಶನಗಳನ್ನು 30 ವರ್ಷದ ಅವಧಿಗೆ ಸರ್ಕಾರದ ನಿರ್ದೇಶನ ಹಾಗೂ ಮಾರ್ಗಸೂಚಿಗಳಂತೆ, ಸದರಿ ಸಂಘ-ಸಂಸ್ಥೆಗಳಿಗೆ ನೀಡುವ ಬಗ್ಗೆ ಒಪ್ಪಿಗೆ ನೀಡಿ, ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಮುಖ್ಯಾಧಿಕಾರಿಗಳಿಗೆ ಅಧಿಕಾರ ನೀಡಿ ಸರ್ವಾನುಮತದಿಂದ ಠರಾವು ಪಾಸ ಮಾಡಲಾಯಿತು.

ಸಹಿ/-
ಆಡಳಿತಾಧಿಕಾರಿಗಳು,
ಪುರಸಭೆ ಅಣ್ಣಿಗೇರಿ ಹಾಗೂ
ಉಪ ವಿಭಾಗಾಧಿಕಾರಿಗಳು ಧಾರವಾಡ.

ನಕಲು ಪ್ರತಿ
ಮುಖ್ಯಾಧಿಕಾರಿ
ಪುರಸಭೆ ಅಣ್ಣಿಗೇರಿ.



File No. DMA/DEV/OTH/80/2025-DMA DEV-DIRECTORATE OF MUNICIPAL ADMINISTRATION (Computer No. 1807222)

## ಪುರಸಭೆ ಕಾರ್ಯಾಲಯ, ನವಲಗುಂದ.

ದಿನಾಂಕ : 22-07-2025 ರಂದು ಮಂಗಳವಾರ ದಿವಸ ಮುಂಜಾನೆ 11-00 ಘಂಟೆಗೆ ಜರುಗಿದ ವಿಶೇಷ ಸಭೆಯಲ್ಲಿ ಪಾಸಾದ ನಡಾವಳಿಗಳು.

ವಿಷಯ :29) ಕಾಂಗ್ರೆಸ್ ಭವನ ನಿರ್ಮಾಣಕ್ಕಾಗಿ ನಾಗರೀಕ ಸೌಲಭ್ಯದ ನಿವೇಶನ ಮಂಜೂರು ಮಾಡುವ ಕುರಿತು.

### ಠರಾವ ನಂ.39.

ಸದರಿ ವಿಷಯವನ್ನು ಸಭೆಯಲ್ಲಿ ಮಂಡಿಸಲಾಗಿ, ಶ್ರೀ ಎನ್.ಹೆಚ್.ಕೋನರಡ್ಡಿ ಮಾನ್ಯ ಶಾಸಕರು ನವಲಗುಂದ ವಿಧಾನಸಭಾ ಕ್ಷೇತ್ರ ರವರು ತಮ್ಮ ಪತ್ರ ಸಂ/ನವಿಕ್ಷೇ :ಬೆಂಕ :2025-26/5327 ದಿನಾಂಕ:18-06-2025 ರಂತೆ ನವಲಗುಂದ ಪುರಸಭೆ ವ್ಯಾಪ್ತಿಯಲ್ಲಿ ಕಾಂಗ್ರೇಸ್ ಭವನ ನಿರ್ಮಾಣಕ್ಕಾಗಿ ಸುಮಾರು ರಿ.ಸ.ನಂ. 414/1 ರಲ್ಲಿ 15ಗುಂಟೆ ಅಳತೆಯ ಸಿ.ಎ. ನಿವೇಶನವನ್ನು ಕಾಂಗ್ರೆಸ್ ಭವನ ಟ್ರಸ್ಟ್ ಬೆಂಗಳೂರು ಇವರಿಗೆ ರಿಯಾಯತಿ ದರದಲ್ಲಿ ಮಂಜೂರು ಮಾಡಲು ಕೋರಿರುತ್ತಾರೆ. ಸದರಿ ವಿಷಯವನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಪುರಸಭೆ ವ್ಯಾಪ್ತಿಯ ರಿ.ಸ.ನಂ414/1 ರಲ್ಲಿ ಇರುವ ಸಿ.ಎ. ನಿವೇಶನ ಕ್ಷೇತ್ರ 1286.77 ಚ.ಮೀ. (12ಗುಂ.11ಅಣೆ 50ಪೈ) ನಿವೇಶನದಲ್ಲಿ ಪುರಸಭೆಯ ಠರಾವ ನಂ.64 ದಿನಾಂಕ:12-10-2018 ರಂತೆ ಪಶ್ಚಿಮ ಭಾಗದ 05ಗುಂಟೆ ನಿವೇಶನವನ್ನು ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ಯ ಇಂಜೇನಿಯರಿಂಗ ಉಪ ವಿಭಾಗ, ನವಲಗುಂದ ರವರಿಗೆ ಹಂಚಿಕೆ ಮಾಡಲು ತೀರ್ಮಾನಿಸಲಾಗಿರುತ್ತದೆ, ಅದರಂತೆ ಈ ಕಾರ್ಯಾಲಯದ ಪತ್ರ ಸಂ/ಪುಸನ/ಸಿಬ್ಬಂದಿ/ ಕಅ/ವಹಿ/2021-22 ದಿನಾಂಕ:16-10-2021 ಮತ್ತು 22.05.2025 ರಂತೆ ಲೀಜ್ ಮೊತ್ತವನ್ನು ಭರಣಾ ಮಾಡಲು ತಿಳಿಸಲಾಗಿದ್ದು, ಈ ಕುರಿತು ಸದರಿಯವರು ತಮ್ಮ ಪತ್ರ ನಂ:ಪಂರಾ:ಇಂಉವಿ:ನವಲಜನ:2024-25/84 ದಿನಾಂಕ : 05-07-2025 ರಂತೆ ಸದರಿ ನಿವೇಶನದ ಲೀಜ್ ಮೊತ್ತವನ್ನು ಪಾವತಿಸಲು ಪ್ರಸ್ತುತ ಅನುದಾನ ಲಭ್ಯವಿರುವದಿಲ್ಲ ಕಾರಣ ಸದರೀ ಹಂಚಿಕೆಯನ್ನು ಹಿಂಪಡೆಯಲು ವಿನಂತಿಸಿದ್ದಾರೆ. ಕಾರಣ ಸದರಿಯವರಿಗೆ ಮಂಜೂರಿಸಿದ್ದನ್ನು ರದ್ದುಗೊಳಿಸಿ, ಸದರಿ ನಿವೇಶನದ ಒಟ್ಟು ಕ್ಷೇತ್ರ 1286.77 ಚ.ಮೀ. (12ಗುಂ.11ಅಣೆ 50ಪೈ) ಕಾಂಗ್ರೇಸ್ ಭವನ ಟ್ರಸ್ಟ್ ಬೆಂಗಳೂರು ಇವರಿಗೆ ರಿಯಾಯತಿ ದರದಲ್ಲಿ ಲೀಜ್ ಆಧಾರದ ಮೇಲೆ ನೀಡಲು ಸರ್ವಾನುಮತದಿಂದ ಠರಾಯಿಸಲಾಯಿತು.

ಸೂಚಕರು :- ಶ್ರೀಮತಿ ಫರೀದಾಬೇಗಂ ಉಸ್ಮಾನ ಬಬರ್ಚಿ,
ಅನುಮೋದಕರು :- ಶ್ರೀ ಹನಮಂತಪ್ಪ ಲಕ್ಷ್ಮಣ ಪಾಲಿಕಾರ,

Sd/-
ಅಧ್ಯಕ್ಷರು,
ಪುರಸಭೆ, ನವಲಗುಂದ.

" ನಕಲು "

ಮುಖ್ಯಾಧಿಕಾರಿ,
ಪುರಸಭೆ, ನವಲಗುಂದ.



ile No. DMA/DEV/OTH/118/2025-DMA_DEV-DIRECTORATE OF MUNICIPAL ADMINISTRATION (Computer No. 1877502)
Generated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 11

# ಪಟ್ಟಣ ಪಂಚಾಯತಕಾರ್ಯಾಲಯ, ಲೋಕಾಪೂರ

## ದಿ: 28/03/2025 ರಂದು ಜರುಗಿದ ಸಾಮಾನ್ಯ ಸಭೆಯ ನಡವಳಿಕೆ ನಕಲು ಪ್ರತಿ.

**ವಿಷಯ ನಂ: 123/1:** ಲೋಕಾಪೂರ ಪಟ್ಟಣದ ವ್ಯಾಪ್ತಿಯ ಬಾಗಲಕೋಟೆ ರಸ್ತೆಗೆ ಹೊಂದಿಕೊಂಡಿರುವ ಆಸ್ತಿ ನಂ: 3741ಕ್ಷೇತ್ರ: 400.62 ಚ.ಮಿ ನೇದ್ದರ ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸಿದ ಜಾಗೆಯನ್ನ ಮಂಜೂರಿಸುವ ಕುರಿತು.

**ಠರಾವು ನಂ: 157** ಲೋಕಾಪೂರ ಪಟ್ಟಣದ ವ್ಯಾಪ್ತಿಯ ಬಾಗಲಕೋಟೆ ರಸ್ತೆಗೆ ಹೊಂದಿಕೊಂಡಿರುವರಿ.ಸ.ನಂ 128/1ಅ2 ಭೂಪರಿವರ್ತನೆಯಾದ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಾಗೆಯ ಆಸ್ತಿ ನಂ 3741 ಪ್ಲಾಟ ನಂ 24. ಕ್ಷೇತ್ರ: 400.62 ಚ.ಮೀ ಉ–ದ 21.98 ಮೀ ಪೂ–ಪ 21 ಮೀ ಇದಕ್ಕೆ ಚಕಬಂದಿ ಪೂರ್ವಕ್ಕೆ- ರಿ.ಸ.ನಂ 128/ಬ ಪಶ್ಚಿಮಕ್ಕೆ 9 ಮೀ ರಸ್ತೆ ಉತ್ತರ ಕ್ಕೆ – 9ಮೀ ರಸ್ತೆ ದಕ್ಷಿಣಕ್ಕೆ ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಿದ ಜಾಗೆಯನ್ನು ಕರ್ನಾಟಕ ರಾಜ್ಯದ ಕಾಂಗ್ರೇಸ್ ಪಕ್ಷದ ಕಾರ್ಯಕಾರಿ ಸಮೀತಿಯ "ಕಾಂಗ್ರೆಸ್ ಭವನ ಟ್ರಸ್ಟ" ವ್ಯಾಪ್ತಿಯ ಲೋಕಾಪೂರ ಬ್ಲಾಕ್ ಕಾಂಗ್ರೇಸ್ ಸಮಿತಿಯ ಕಾರ್ಯಾಲಯಕ್ಕೆ ಲೀಜ್ ಆಧಾರದ ಮೇಲೆ ಮುಂದಿನ 30 ವರ್ಷಗಳ ಕಾಲ ಸದರಿ ಕಾರ್ಯಾಲಯಕ್ಕೆ ಕೂಡಲೇ ಮಂಜೂರಾತಿ ನೀಡಬಬೇಕು ಮತ್ತು ನಿಯಮಾನುಸಾರ ಸದರಿ ಜಾಗೆಯನ್ನ ಮಂಜೂರಾತಿ ನೀಡುವದಕ್ಕೆ ತಗಲುವ ಶುಲ್ಕವನ್ನ ನಾವು ಭರಿಸುತ್ತೇವೆ ಎಂದು ಈ ಮೂಲಕ ಕಾಂಗ್ರೆಸ್ ಟ್ರಸ್ಟ ಫರವಾಗಿ ವಿನಂತಿಸಿರುತ್ತಾರೆ.

: ತೀರ್ಮಾನ :

ಅದರಂತೆ, ಸದರಿ ವಿಷಯವನ್ನು ಮಾನ್ಯ ಆಡಳಿತಾಧಿಕಾರಿಗಳು ಕೂಲಂಕುಷವಾಗಿ ಪರಿಶೀಲಿಸಲಾಗಿ ಲೋಕಾಪೂರ ಪಟ್ಟಣದ ವ್ಯಾಪ್ತಿಯಲ್ಲಿ ಒಟ್ಟು 09 ನಾಗರಿಕ ಸೌಲಭ್ಯಕ್ಕಾಗಿ ಲಭ್ಯ ವಿದ್ದು ಆದರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ :-ನಅಇ 27 ಟಿಟಿಪಿ 2016, ದಿನಾಂಕ 24-05-2017 ರ ಪ್ರಕಾರ ಒಟ್ಟು 09 ನಾಗರಿಕ ಸೌಲಭ್ಯ ನಿವೇಶನಗಳಲ್ಲಿ ಶೇ 90 ರಷ್ಟು ಸರ್ಕಾರಿ ಗೆ ಮೀಸಲಿಟ್ಟು ಉಳಿದ ಶೇ 10 ರಲ್ಲಿ ಪ.ಜಾ ಗೆ ಶೇ18, ಪಪಂ ಗೆ ಶೇ3 ರಷ್ಟು ಇತರೆಯಲ್ಲಿ ಅಂಗ ವಿಕಲರಿಗೆ ಶೇ 2ರಷ್ಟು ಮೀಸಲಿಟ್ಟು ಉಳಿದ ನಿವೇಶನಗಳಲ್ಲಿ ಇತರೆ ಸಂಸ್ಥೆಗಳಿಗೆ ನೀಡಲು ಅವಕಾಶ ವಿದ್ದು ಸದರಿ ಲೋಕಾಪುರ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಒಟ್ಟು 09 ನಿವೇಶನಗಳಿದ್ದು ಆದರಲ್ಲಿ ಶೇ90 ರಷ್ಟು ಅಂದರೆ 08 ನಿವೇಶನಗಳು ಸರ್ಕಾರಿಗೆ ಮೀಸಲಿಟ್ಟು ಉಳಿದ ಶೇ 10 ರಲ್ಲಿ ಪಜಾ, ಪಪಂ, ಹಾಗೂ ಅಂಗವಿಕಲರಿಗೆ ಮತ್ತು ಇತರ ಸಂಸ್ಥೆಗಳಿಗೆ ಒಂದೇ ನಿವೇಶನ ಉಳಿದ ಕಾರಣ ಮೀಸಲಿಡಲು ಲಭ್ಯ ವಿಲ್ಲದ ಕಾರಣ ಮತ್ತು ಪಜಾ, ಪಪಂ, ಮತ್ತು ಅಂಗವಿಕಲರ ಯಾವುದೇ ಅರ್ಜಿಗಳು ಸಲ್ಲಿಕೆಯಾಗಿರುವದಿಲ್ಲಾ ಎಂದು ವಿಷಯ ನಿರ್ವಾಹಕರು ಸಭೆಯಲ್ಲಿ ವಿವರಿಸಿದಾಗ ಮುಖ್ಯಾಧಿಕಾರಿಗಳು ಹಾಗೂ ಮಾನ್ಯ ಆಡಳಿತಾಧಿಕಾರಿಗಳು ಶೇ 10 ರಲ್ಲಿ ಉಳಿದ ಒಂದು ನಿವೇಶನವಾದ ಬಾಗಲಕೋಟೆ ರಸ್ತೆಗೆ ಹೊಂದಿಕೊಂಡಿರುವ ರಿ.ಸ.ನಂ 128/1ಅ2 ಭೂಪರಿವರ್ತನೆಯಾದ ನಾಗರಿಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಾಗೆಯ ಆಸ್ತಿ ನಂ 3741 ಪ್ಲಾಟ ನಂ 24. ಕ್ಷೇತ್ರ: 400.62 ಚ.ಮೀ ಉ.ದ 21.98 ಮೀ ಪೂ–ಪ 21 ಮೀ ಇದಕ್ಕೆ ಚಕಬಂದಿ ಪೂರ್ವಕ್ಕೆ-ರಿ.ಸ.ನಂ 128/ಬ ಪಶ್ಚಿಮಕ್ಕೆ 9 ಮೀ ರಸ್ತೆ



File No. DMA/DEV/OTH/29/2025-DMA_DEV-DIRECTORATE OF MUNICIPAL ADMINISTRATION (Computer No. 1722576)
Generated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 11

ಉತ್ತರ ಕ್ಕೆ – 9ಮೀ ರಸ್ತೆ ದಕ್ಷಿಣಕ್ಕೆ ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಿದ ಜಾಗೆಯನ್ನು ಕರ್ನಾಟಕ ರಾಜ್ಯದ ಕಾಂಗ್ರೇಸ್ ಪಕ್ಷದ ಕಾರ್ಯಕಾರಿ ಸಮೀತಿಯ "ಕಾಂಗ್ರೆಸ್ ಭವನ ಟ್ರಸ್ಟ" ವ್ಯಾಪ್ತಿಯ ಲೋಕಾಪೂರ ಬ್ಲಾಕ್ ಕಾಂಗ್ರೇಸ್ ಸಮಿತಿಯ ಕಾರ್ಯಾಲಯಕ್ಕೆ ಲೀಜ್ ಆಧಾರದ ಮೇಲೆ 30 ವರ್ಷಗಳ ಕಾಲ ಸದರಿ ಕಾರ್ಯಾಲಯಕ್ಕೆ ನೀಡಲು ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರಕ್ಕೆ ಪ್ರಸ್ತಾವಣೆ ಸಲ್ಲಿಸಲು ಮುಖ್ಯಾಧಿಕಾರಿಗಳಿಗೆ ಸೂಚಿಸಿ ಠರಾವು ಪಾಸು ಮಾಡಲಾಯಿತು.

ಆಡಳಿತಾಧಿಕಾರಿಗಳು
**ಪಟ್ಟಣ ಪಂಚಾಯತ ಲೋಕಾಪೂರ**



File No. DMA/DEV/OTH/29/2025-DMA_DEV-DIRECTORATE OF MUNICIPAL ADMINISTRATION (Computer No. 1722576)

## ಪುರಸಭೆ ಅಫಜಲಪೂರ

### ದಿನಾಂಕ.01.04.2025 ರಂದು ಜರುಗಿದ ಸಾಮಾನ್ಯ ಸಭೆಯ ನಡುವಳಿಗಳು

| ವಿಷಯ ನಂ. | ವಿಷಯ | ಗೊತ್ತುವಳಿ |
|---|---|---|
| 02 | ಸರ್ಕಾರಿ/ಸಂಘ ಸಂಸ್ಥೆಗಳಿಗೆ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ನೀಡುವ ಕುರಿತು. | **ಠರಾವು ಸಂಖ್ಯೆ02.** ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಸರ್ಕಾರಿ/ಸಂಘ ಸಂಸ್ಥೆಗಳಿಗೆ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿರುವ ನಿವೇಶನಗಳನ್ನು ಹಂಚಿಕೆ ಮಾಡಲು ವಿವಿಧ ಸಂಘ ಸಂಸ್ಥೆಗಳ ಈ ಕೆಳಕಂಡಂತೆ ಮನವಿಗಳು ಸ್ವೀಕೃತವಾಗಿರುತ್ತದೆಂದು ಮುಖ್ಯಾಧಿಕಾರಿಗಳು ಸಭೆಯಲ್ಲಿ ತಿಳಿಸಿರುತ್ತಾರೆ,<br><br>1] ಮಾನ್ಯ ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಅಫಜಲಪೂರ<br>ಎ] ಡಾ// ಬಾಬು ಜಗಜೀವನರಾಮ ಸಮುದಾಯ ಭವನ 100*100<br>ಬಿ] ಶ್ರೀ ಸೇವಾಲಾಲ ಸಮುದಾಯ ಭವನ 100*100<br>ಸಿ] ಶ್ರೀ ಮಹರ್ಷಿ ವಾಲ್ಮೀಕಿ ಸಮುದಾಯ ಭವನ 100*100<br>ಡಿ] ಶ್ರೀ ಸಿದ್ರಾಮೇಶ್ವರ ಸಮುದಾಯ ಭವನ 100*100<br>2] ಮಾನ್ಯ ತಾಲೂಕಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಅಫಜಲಪೂರ<br>ಎ] ಸರಕಾರಿ ಮೆಟ್ರಿಕ್ ನಂತರ ಬಾಲಕರ ವಸತಿ ನಿಲಯ ಕಟ್ಟಡ ನಿರ್ಮಾಣಕ್ಕಾಗಿ ಸರ್ವೆ ನಂ 372/6 ಸಿ.ಎ ನಿವೇಶನ ಸಂಖ್ಯೆ 5-1-1349 ರ ಅಳತೆ 8247.9 ಚ.ಅ<br>3] ಮಾನ್ಯ ಶ್ರೀ ವಿಜಯ ಮಲಗುಂಡ ಟ್ರಸ್ಟ್ ಕಾಂಗ್ರೇಸ ಭವನ ಟ್ರಸ್ಟ್ ಬೆಂಗಳೂರು ಸರ್ವೆ ನಂ 354/12 ರ ನಿವೇಶನ ಸಂಖ್ಯೆ 5-5-876 ರ<br>4] ಶ್ರೀ ಶಿವಣ್ಣ ಬಿ ಬಜಂತ್ರಿ ಅಧ್ಯಕ್ಷರಾದ ಮತ್ತು ಶ್ರೀ ಬಸವರಾಜ ಹೆಚ್ ಬಜಂತ್ರಿ ಉಪಾಧ್ಯಕ್ಷರಾದ ಅಫಜಲಪೂರ ತಾಲೂಕು ಕೊರಮ ಕ್ಷೇಮಾಭಿವೃಧಿ ಸಂಘ (ರಿ)<br>ಎ] ಕೊರಮ ಸಮುದಾಯ ಭವನ ನಿರ್ಮಾಣಕ್ಕಾಗಿ<br>5] ಶ್ರೀ ಭೀಮಣ್ಣ ಎಂ ಪೂಜಾರಿ ಕರ್ನಾಟಕ ಪ್ರದೇಶ ಕುರುಬರ ಸಂಘ ಅಫಜಲಪೂರ<br>ಎ] ಸಮುದಾಯ ಭವನ ನಿರ್ಮಾಣಕ್ಕಾಗಿ<br>6] ಶ್ರೀ ಸಿದ್ದಾರಾಮ ಜೆ ಸೀತನೂರು ಅಧ್ಯಕ್ಷರು ಅಂಗವಿಕಲರ ಸೇವಾ ಹಾಗೂ ಅಭಿವೃದ್ಧಿ ಟ್ರಸ್ಟ್ ಆನೂರು<br>ಎ] ಅಂಗವಿಕಲರ ಸೇವಾ ಹಾಗೂ ಅಭಿವೃದ್ಧಿ ಕಛೇರಿಗಾಗಿ ಖಾಲಿ ನಿವೇಶನ<br>7] ಶ್ರೀ ಚಂದ್ರಶೇಖರ ಗುರುಸಂಗಪ್ಪ ಕರಜಗಿ ಅಧ್ಯಕ್ಷರು ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕಾ ಘಟಕ ಅಫಜಲಪೂರ<br>ಎ] ಸಮಾಜ ಭವನ ನಿರ್ಮಾಣಕ್ಕಾಗಿ ನಿವೇಶನ ಸಂಖ್ಯೆ 5-5-1019 |



ile No. DMA/DEV/OTH/95/2025-DMA_DEV-DIRECTORATE OF MUNICIPAL ADMINISTRATION (Computer No. 1834593)
[redacted] FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 12:14 PM

ಎ] ಸಿದ್ಧರಾಮೇಶ್ವರ ರಂಗ ಮಂದಿರಕ್ಕೆ ನಿವೇಶನ ಸಂಖ್ಯೆ 10–70/ಎ

9] ತಾಲೂಕಾ ನಿವೃತ್ತ ನೌಕರರ ಸಂಘ ಅಫಜಲಪೂರ

ಎ] ಕಛೇರಿ ನಿರ್ಮಾಣ ಸಲುವಾಗಿ

10] ಶ್ರೀ ಮಲ್ಲಿಕಾರ್ಜುನ ಜಿ ಹಿರೇಮಠ ಅಧ್ಯಕ್ಷರು ಕಾರ್ಯನಿರತ ಪತ್ರಕರ್ತರ ಸಂಘ (ರಿ) ತಾಲೂಕಾ ಅಫಜಲಪೂರ

ಎ] ಪತ್ರಿಕ ಭವನ ನಿರ್ಮಾಣಕ್ಕಾಗಿ 100*100 ಅಡಿ ಅಳತೆಯ ಸಿ.ಎ ನಿವೇಶನ

ಸದರಿ ಸ್ವೀಕೃತವಾದ ಸಿ.ಎ ನಿವೇಶನಗಳ ಹಂಚಿಕೆ ಕುರಿತು ಸಭೆಯಲ್ಲಿ ಚರ್ಚಿಸಲಾಗಿ ಸರ್ಕಾರದ ಸುತ್ತೋಲೆಯಂತೆ ನಿಯಮನುಸಾರ ಹಾಗೂ ಅರ್ಜಿದಾರರಿಂದ ಸೂಕ್ತ ವಿವರಣೆದೊಂದಿಗೆ ದಾಖಲೆಗಳನ್ನು ಪಡೆದು ಕ್ರಮವಹಿಸಲು ಸರ್ವಾನುಮತದಿಂದ ನಿರ್ಣಯಿಸಲಾಯಿತು.

3] ಮಾನ್ಯ ಶ್ರೀ ವಿಜಯ ಮಲಗುಂಡ ಟ್ರಸ್ಟ್ ಕಾಂಗ್ರೇಸ ಭವನ ಟ್ರಸ್ಟ್ ಬೆಂಗಳೂರು ಸರ್ವೆ ನಂ 354/12 ರ ನಿವೇಶನ ಸಂಖ್ಯೆ 5–5–876 ರಲ್ಲಿ ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಕುರಿತು ಸದಸ್ಯರಾದ ಶ್ರೀ ಶಿವಾನಂದ ನಾಗಪ್ಪ ಸಲಗಾರ ಮತ್ತು ಶ್ರೀ ಭೀಮು ಅಶೋಕ ಬಬಲಾದ ರವರು ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಆಕ್ಷೇಪಣೆ ವ್ಯಾಕ್ತ ಪಡಿಸಿದರು ನಂತರ ಮಾನ್ಯ ಉಪಾಧ್ಯಕ್ಷರಾದ ಶ್ರೀ ಶಿವಕುಮಾರು ಸಿದ್ಧಾರಾಮ ಪದಕಿ ಇವರು ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಮಾಡಲು ಬಹುಮತ ಹಾಕಲು ತಿಳಿಸಿದರು, ಸದರಿ ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಮಾಡಲು ಸಭೆಯಲ್ಲಿ ಹಾಜರಿದ ಈ ಕೆಳಕಂಡ ಸದಸ್ಯರು ಪರ ಮತ್ತು ವಿರೋದ ವ್ಯಾಕ್ತ ಪಡಿಸಿದ್ದರು.

**1] ಸರ್ವೆ ನಂ 354/12 ರ ನಿವೇಶನ ಸಂಖ್ಯೆ 5–5–876 ರಲ್ಲಿ ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಕುರಿತು ಪರವಾಗಿ ಕೈ ಎತ್ತುವ ಮೂಲಕ ಸಹಮತ ವ್ಯಾಕ್ತಿಪಡಿದವರು**

1] ಶ್ರೀಮತಿ ಸುಹಾಸನಿ ವಿರೇಶ ಖೇಳಗಿ ಅಧ್ಯಕ್ಷರು
2] ಶ್ರೀ ಶಿವಕುಮಾರ ಸಿದ್ರಾಮ ಪದಕಿ ಉಪಾಧ್ಯಕ್ಷರು
3] ಶ್ರೀ ಬಾಬು ಹಳ್ಯಾಳ ಸದಸ್ಯರು
4] ಶ್ರೀಮತಿ ಸುನಂದಾ ಗಂಗಾಧರ ಜಮಾದಾರ ಸದಸ್ಯರು
5] ಶ್ರೀ ಹಾಜಿ ಖಾಸಿಂಸಾಬ ಮುಜಾವರ ಸದಸ್ಯರು
6] ಶ್ರೀಮತಿ ರೇಣುಕಾ ರಾಜಶೇಖರ ಪಾಟೀಲ ಸದಸ್ಯರು
7] ಶ್ರೀ ನಿಂಗಪ್ಪ ಶಿವಪ್ಪ ಚಲವಾದಿ ಸದಸ್ಯರು
8] ಶ್ರೀ ಚಂದು ದೇಸಾಯಿ ಸದಸ್ಯರು
9] ಶ್ರೀ ರವಿಂದ್ರ ನಂದಶೆಟ್ಟಿ ಸದಸ್ಯರು
10] ಶ್ರೀ ಮಹಾಂತ ರಾಠೋಡ ಸದಸ್ಯರು
11] ಶ್ರೀ ಯಮನಪ್ಪ ಭಾಸಗಿ ಸದಸ್ಯರು

File No. DMA/DEV/OTH/95/2025-DMA_DEV-DIRECTORATE OF MUNICIPAL ADMINISTRATION (Computer No. 1834593)

| | | |
|---|---|---|
| | | 13] ಶ್ರೀಮತಿ ಕಮಲಾ ತಿಪ್ಪಣ್ಣ ಸದಸ್ಯರು<br>14] ಶ್ರೀಮತಿ ಶಂಕ್ರಮ್ಮ ಪ್ರಭು ಹರಳಯ್ಯ ಸದಸ್ಯರು<br>15] ಶ್ರೀಮತಿ ಶಾಹೇದ ಬೇಗಂ ಅಬ್ದುಲ್ ರಹುಫ್ ಪಟೇಲ್<br><br>**2] ಸರ್ವೆ ನಂ 354/12 ರ ನಿವೇಶನ ಸಂಖ್ಯೆ 5-5-876 ರಲ್ಲಿ ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಕುರಿತು ವಿರೋದವಾಗಿ ಕೈ ಎತ್ತುವ ಮೂಲಕ ಆಕ್ಷೇಪಣೆ ವ್ಯಾಕ್ತಿಪಡಿದವರು**<br>1] ಶ್ರೀ ಶಿವಾನಂದ ನಾಗಪ್ಪ ಸಲಗಾರ ಸದಸ್ಯರು<br>2] ಶ್ರೀ ಭೀಮು ಅಶೋಕ ಬಬಲಾದ ಸದಸ್ಯರು<br>3] ಶ್ರೀಮತಿ ಶಿಲ್ಪ ಮಳೇಂದ್ರ ಡಾಂಗೆ ಸದಸ್ಯರು<br>4] ಶ್ರೀಮತಿ ಭಾಗಮ್ಮಾ ಸೈದಪ್ಪ ಹಿರೇಕುರುಬರ ಸದಸ್ಯರು<br><br>ಸರ್ವೆ ನಂ 354/12 ರ ನಿವೇಶನ ಸಂಖ್ಯೆ 5-5-876 ರಲ್ಲಿ ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಕುರಿತು ಸಭೆಯಲ್ಲಿ ಹಾಜರಿದ್ದ ಒಟ್ಟು ಸದಸ್ಯರ ಪೈಕಿ 04 ಜನ ಸದಸ್ಯರು ವಿರೋದ ವ್ಯಾಕ್ತಿಪಡಿಸಿದ್ದು ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು ಸೇರಿ 15 ಜನ ಸದಸ್ಯರು ಕಾಂಗ್ರೇಸ ಭವನಕ್ಕೆ ನಿವೇಶನ ಹಂಚಿಕೆ ಮಾಡಲು ಸಭೆಯಲ್ಲಿ ನಿರ್ಣಯಿಸಲಾಯಿತು. |

ಸಹಿ/-
ಅಧ್ಯಕ್ಷರು
ಪುರಸಭೆ ಅಫಜಲಪೂರ

ಮುಖ್ಯಾಧಿಕಾರಿ
ಪುರಸಭೆ ಅಫಜಲಪೂರ



ile No. DMA/DEV/OTH/95/2025-DMA_DEV-DIRECTORATE OF MUNICIPAL ADMINISTRATION (Computer No. 1834593)
...ated from eOffice by SAMYUKTA, DMA-FDA(SY), FIRST DIVISION ASSISTANT, DIRECTORATE OF MUNICIPAL ADMINISTRATION on 01/12/2025 12:14 PM